[illegible]




# ಅನುದಿನದ ಆಹಾರ

**ANUDHINADA AHARA - August 2014**

ಆಗಸ್ಟ್ – 2014

ಮರ 15 ಹಣ್ಣು 8 Tree 15 Fruit 8


## ಕಾಣುವದೂ, ಪಡೆಯುವದೂ!

"ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು. ನಿಮ್ಮ ಯೌವನಸ್ಥರಿಗೆ ದಿವ್ಯ ದರ್ಶನಗಳಾಗುವವು" (ಯೋವೇಲ 2:28).

ಅಪೊ. ಪೌಲನು ಪಂಚಾಶತ್ತಮದ ದಿನದಂದು ಮೇಲ್ಕಂಡ ವಾಕ್ಯವನ್ನು ತೋರಿಸಿ ನಿಮ್ಮ ಯೌವನಸ್ಥರು ದರ್ಶನಗಳನ್ನು ಪಡೆಯುವರು ಎಂದು ಪ್ರಸಂಗಿಸಿದನು. ಕಾಣುವದಕ್ಕೂ ಪಡೆಯುವದಕ್ಕೂ ನಡುವೆ ಒಂದು ಕಾಲವುಂಟು. ಅದನ್ನು ಕುರಿತು ಪ್ರವಾದಿಯಾದ ಹಬಕ್ಕೂಕನು ಹೇಳುವಾಗ "ನಿನಗಾದ ದರ್ಶನವನ್ನು ಬರೆ; ಓದುವವರು ಶೀಘ್ರವಾಗಿ ಓದುವಂತೆ ಹಲಿಗೆಗಳ ಮೇಲೆ ಅದನ್ನು ಕೆತ್ತು. ಅದು ಕ್ಲುಪ್ತಕಾಲದಲ್ಲಿ ನೆರವೇರತಕ್ಕದ್ದು. ಆದರೆ ಪರಿಣಾಮಕ್ಕೆ ತ್ವರೆಪಡುತ್ತದೆ. ಮೋಸ ಮಾಡದು; ತಡವಾದರೂ ಅದಕ್ಕೆ ಕಾದಿರು. ಅದು ಬಂದೇ ಬರುವದು ತಾಮಸವಾಗದು" ಅನ್ನುತ್ತಾನೆ (ಹಬ.2:2,3).

ಉದಾಹರಣೆಯಾಗಿ, ಯೋಸೇಫನಿಗೆ ಅವನ ಯೌವನ ಪ್ರಾಯದಲ್ಲಿ ಕೆಲವು ದರ್ಶನಗಳನ್ನು ಕೊಟ್ಟನು. "ಕನಸಿನಲ್ಲಿ ನಾವು ಹೊಲದಲ್ಲಿ ಸಿವುಡುಗಳನ್ನು ಕಟ್ಟುತ್ತಾ ಇದ್ದೆವು. ಆಗ ನನ್ನ ಸಿವುಡು ಎದ್ದು ನಿಲ್ಲಲು, ನಿಮ್ಮ ಸಿವುಡುಗಳು ಸುತ್ತಲೂ ಬಂದು ನನ್ನ ಸಿವುಡಿಗೆ ಅಡ್ಡಬಿದ್ದವು" ಅಂದನು (ಆದಿ.37:7). ಇದು ಲೋಕದ ಪ್ರಕಾರವಾದ ದರ್ಶನ. ಎರಡನೆಯದು ಉನ್ನತಕ್ಕೆ ಸಂಬಂಧಪಟ್ಟ ದರ್ಶನ. ಸೂರ್ಯಚಂದ್ರರೂ, ಹನ್ನೊಂದು ನಕ್ಷತ್ರಗಳೂ ತನಗೆ ಅಡ್ಡಬಿದ್ದವೆಂದು ಹೇಳಿದನು (ಆದಿ.37:9). ಯೋಸೇಫನು ತನ್ನ ಹದಿನೇಳನೇ ವಯಸ್ಸಿನಲ್ಲಿ ಈ ಕನಸನ್ನು ಕಂಡನು. ಈ ದರ್ಶನ ನೆರವೇರಬೇಕಾದರೆ ಸುಮಾರು ಇಪ್ಪತ್ತಮೂರು ವರ್ಷಗಳು ಕಾದಿರಬೇಕಾಯಿತು ಎಂದು ವೇದಪಂಡಿತರು ಹೇಳುವರು. ದರ್ಶನವು ಒಂದು ನಿಯಮಿತಕಾಲಕ್ಕೆ ಇಡಲ್ಪಟ್ಟಿದೆ. ನಿಶ್ಚಯವಾಗಿ ಅದು ನೆರವೇರುವದು ಎಂದು ಹಬಕ್ಕೂಕನು ಬರೆದಿರುವದು ಎಷ್ಟು ಸತ್ಯ!

ದರ್ಶನ ಎಂಬ ಮಾತಿಗೆ ಎರಡು ಮುಖ್ಯವಾದ ಅರ್ಥಗಳುಂಟು. ಒಂದು ಪ್ರಾರ್ಥನೆಯ ಸಮಯದಲ್ಲಿ ಇಲ್ಲವೇ, ಮಲಗಿರುವಾಗ ಪವಿತ್ರಾತ್ಮನ ಮೂಲಕ ಕರ್ತನು ಮನಃಪಟಲದ ಮೇಲೆ

ತರುವ ದರ್ಶನ. ಎರಡನೆಯದು ದರ್ಶನವೆಂದರೆ ಜೀವನದಲ್ಲಿನ ಧ್ಯೇಯ ಅಥವ ಗುರಿ. ಕೊರಿಯಾ ದೇಶದಲ್ಲಿ ಬೋಧಕರಾದ ಪಾಲ್‌ಯಾಂಗಿ ಚೋ ಅವರು ತನ್ನ ಸಭೆಯನ್ನು ಪ್ರಾರಂಭಿಸಿದಾಗ, ಆ ದೇವಾಲಯದಲ್ಲಿ ಒಟ್ಟು ಐದು ಜನರು ಮಾತ್ರ ಇದ್ದರು. ಅವರ ಹೆಂಡತಿ, ಅತ್ತೆ, ಇನ್ನು ಮೂರು ಸಹೋದರರು. ಆದರೆ ಅವರಿಗೆ ಒಂದು ದರ್ಶನವಿತ್ತು. "ಐನೂರು ಜನರನ್ನೊಳಗೊಂಡ ಒಂದು ಸಭೆಯನ್ನು ಕಟ್ಟುವೆನು" ಎಂಬುದೇ ದರ್ಶನ. ಆದ್ದರಿಂದ ಅವರು ಪ್ರಸಂಗಿಸುವಾಗ ಐನೂರು ಜನರಿಗೆ ಕೇಳಿಸುವಷ್ಟು ಜೋರಾಗಿ ಪ್ರಸಂಗಿಸುತ್ತಿದ್ದರು. ಸದ್ಯಕ್ಕೆ ಐದು ಜನರಿದ್ದರೂ, 495 ದೇವದೂತರು ಆಲಯದಲ್ಲಿ ಕೂತಿರುವರು ಎಂದು ಅವರ ಹೆಂಡತಿಯ ಬಳಿ ಹೇಳುವರು. ಒಂದು ವರ್ಷದೊಳಗೆ ಸಭೆಗೆ ಐನೂರು ಮಂದಿ ಸೇರಿಬಿಟ್ಟರು. ನಂತರ ತನ್ನ ದರ್ಶನವನ್ನು ಐದು ಸಾವಿರವೆಂದು ಮಾರ್ಪಡಿಸಿಕೊಂಡರು. ಆ ದರ್ಶನವೂ ನೆರವೇರಿತು. ಹೀಗೆ ಅವರ ದರ್ಶನ ಸಾವಿರದಿಂದ ಲಕ್ಷಕ್ಕೆ ಏರಿ ಇಂದು ಅವರ ಸಭೆಯಲ್ಲಿ ಹದಿಮೂರು ಲಕ್ಷಕ್ಕಿಂತಲೂ ಅಧಿಕವಾಗಿ ಸಭಿಕರು ಇರುವರು.

ದರ್ಶನ ಎಂಬುದು ತಾಯಿಯ ಗರ್ಭದಲ್ಲಿರುವ ಶಿಶುವಿನಂತೆ ಅದರೊಂದಿಗೆ ತಾಯಿ ಜೀವಿಸುವಳು, ಕೆಲಸ ಮಾಡುವಳು, ನಿದ್ರಿಸುವಳು. ಆದರೂ ಎಡಬಿಡದೆ ಗರ್ಭದಲ್ಲಿ ಶಿಶು ರೂಪುಗೊಳ್ಳುತ್ತಲೇ ಹೋಗುತ್ತದೆ. ಪೂರ್ಣಗೊಂಡಾಗ ಮಗು ಹುಟ್ಟುತ್ತದೆ. ನಿಮ್ಮ ಜೀವಿತದ ಧ್ಯೇಯವಾದ ದರ್ಶನವನ್ನು ಕರ್ತನೊಂದಿಗೆ ಐಕ್ಯತೆಗೊಳಿಸಿ. ನಿಮ್ಮ ಧ್ಯೇಯವನ್ನು, ಗುರಿಯನ್ನು ನೆರವೇರಿಸುವವನು ಕರ್ತನೇ. ನಿಮ್ಮ ಚಿಂತನೆಯಲ್ಲಿ ಆ ದರ್ಶನವನ್ನು ಇಟ್ಟಾತನು ಆತನೇ. ಅಪೊ. ಪೌಲನು "ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ" (ಫಿಲಿ. 3:14) ಎಂದು ಹೇಳುತ್ತಾನೆ.

ದರ್ಶನವನ್ನು ಕಾಣುವದು ಸುಲಭ, ಕಾಣುವ ದರ್ಶನವನ್ನು ಪಡೆದುಕೊಳ್ಳುವದು ಕಠಿಣ. ಎಡಬಿಡದೆ ಪ್ರಾರ್ಥನೆಯೊಂದಿಗೆ ಪ್ರಯಾಸ ಪಡುತ್ತಲೇ ಇರಬೇಕು. ನೀವು ದರ್ಶನವನ್ನು ಪಡೆಯದಂತೆ ಸೈತಾನನು ಹಲವು ರೀತಿಯಲ್ಲಿ ಹೋರಾಡುತ್ತಲೇ ಇರುತ್ತಾನೆ. ಪ್ರಪಂಚ, ಶರೀರ, ಸೈತಾನ ನಿಮ್ಮೊಂದಿಗೆ ಹೋರಾಡುತ್ತಲೇ ಇರುತ್ತದೆ. ಶೋಧನೆಗಳನ್ನು ಜಯಿಸಿ ನೀವು ದರ್ಶನವನ್ನು ಪೂರ್ಣಪಡಿಸಿಕೊಳ್ಳಬೇಕು. ನೀವು ಪರಲೋಕದರ್ಶನದೊಂದಿಗೆ ನಿಮ್ಮನ್ನು ಐಕ್ಯಗೊಳಿಸಿಕೊಂಡು, ಈ ಪ್ರಪಂಚಕ್ಕೆ ಅನ್ಯರೆಂದೂ, ಪರದೇಶಿಗಳೆಂದೂ ಭಾವಿಸಿ ನಿಮ್ಮ ಓಟವನ್ನು ಓಡಿ ಮುಗಿಸಬೇಕು.

ಹಾಲೂ, ಜೇನೂ ಹರಿಯುವ ಕಾನಾನಿನ ಕುರಿತಾದ ದರ್ಶನವನ್ನು ಕರ್ತನು ಮೊಟ್ಟಮೊದಲು ಅಬ್ರಹಾಮನ ತಂದೆಯಾದ ತೆರಹನಿಗೆ ಕೊಟ್ಟನು. ಕಾನಾನಿಗೆ ಹೊರಟ ಅವನು ಖಾರಾನಿಗೆ ಬಂದು ಅಲ್ಲಿಯೇ ತಂಗಿಬಿಟ್ಟನು (ಆದಿ. 11:31). ಅವನ ದರ್ಶನ ಖಾರಾನಿನೊಂದಿಗೆ ಮುಗಿದುಹೋಯಿತು. ನಂತರ ಕಾನಾನಿನ ದರ್ಶನವನ್ನು ಕರ್ತನು ಅಬ್ರಹಾಮನಿಗೆ ಕೊಟ್ಟನು.



ಸಾಮಾನ್ಯವಾಗಿ ಆ ದರ್ಶನವನ್ನು ನೆರವೇರಿಸಲು ಕರ್ತನು ಅವರಿಗೆ ಜ್ಞಾನವನ್ನೂ, ಬುದ್ಧಿಯನ್ನೂ ನೀಡುವನು. ಅವರ ಸಹಾಯಕ್ಕೆ ಅನೇಕರನ್ನು ಅವರೊಂದಿಗೆ ಸೇರಿಸುವನು. ಕೆಲವರು ಆ ದರ್ಶನದೊಂದಿಗೆ ಒಂದಾಗಿ ಸೇರಿಬಿಡುವರು. ಕೆಲವರು ಆ ದರ್ಶನದೊಂದಿಗೆ ಬಂದು ಸೇರುವರು. ಅಬ್ರಹಾಮನ ದರ್ಶನಕ್ಕೆ ಅವನ ಹೆಂಡತಿ ಸಾರಳು ಗುಣುಗುಟ್ಟಲಿಲ್ಲ. ವಿರೋಧಿಸಲಿಲ್ಲ. ಪೂರ್ಣವಾಗಿ ಅಬ್ರಹಾಮನೊಂದಿಗೆ ಆ ದರ್ಶನದಲ್ಲಿ ಜೊತೆಯಾದಳು. ಆ ದರ್ಶನ ಏನಾಗಿತ್ತು? ನೀನು ಸ್ವದೇಶವನ್ನೂ ಬಂಧುಬಳಗವನ್ನು ಬಿಟ್ಟು ನಾನು ತೋರಿಸುವ ದೇಶಕ್ಕೆ ಹೋಗು. ನಾನು ನಿನ್ನನ್ನು ದೊಡ್ಡ ಜನಾಂಗವನ್ನಾಗಿ ಮಾಡಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು, ನೀನು ಆಶೀರ್ವಾದದ ನಿಧಿಯಾಗುವಿ (ಆದಿ 12:1,2) ಎಂಬುದೇ. ಅಬ್ರಹಾಮನ ಜೊತೆಯಲ್ಲಿ ಲೋಟನು ಹೋದರೂ ಈ ಕಾನಾನ್ ದೇಶವು ಲೋಟನಿಗೆ ಕೊಡಲ್ಪಡಲಿಲ್ಲ. ಅವನು ಮಧ್ಯದಲ್ಲಿ ಸೊದೋಮ್ ಗೊಮೋರದ ನೀರಾವರಿಯ ಸ್ಥಳಗಳನ್ನು ನೋಡಿ ಅಲ್ಲೇ ನಿಂತುಬಿಟ್ಟನು.

ಎರಡನೆಯದಾಗಿ ಅಬ್ರಹಾಮನಿಗೆ ಒಬ್ಬ ಮಗನ ಕುರಿತಾದ ಹಾಗೂ ಒಂದು ಸಂತತಿಯ ದರ್ಶನ ಅವನ ಎಪ್ಪತ್ತೈದನೇ ವಯಸ್ಸಿನಲ್ಲಿ ಕೊಡಲ್ಪಟ್ಟಿತು. ಆ ವಾಗ್ದಾನದ ಮಗನು ಹುಟ್ಟಲು ಇಪ್ಪತ್ತೈದು ವರುಷಗಳು ಕಾಯಬೇಕಾಯಿತು. ಅವನ ಸಂತತಿಯ ದರ್ಶನವನ್ನು ಭೂಮಿಯ ಧೂಳನ್ನು ತೋರಿಸಿ, ಮರಳನ್ನು ತೋರಿಸಿ, ಆಕಾಶದ ನಕ್ಷತ್ರಗಳನ್ನು ತೋರಿಸಿ ನಿನ್ನ ಸಂತತಿ ಇಷ್ಟಾಗಿ ಹೆಚ್ಚುವದು ಎಂದು ಕರ್ತನು ವಾಗ್ದಾನ ಮಾಡಿದನು. ಇಂದು ಅಬ್ರಹಾಮನ ಭೂ ಸಂಬಂಧವಾದ ಸಂತತಿಯನ್ನು (ಇಷ್ಮಾಯೇಲ್ಯರು–ಇಸ್ಲಾಮಿಯರು) ಆತ್ಮೀಕ ಸಂತತಿಯನ್ನೂ (ಕ್ರೈಸ್ತರು) ನೀವು ಕಾಣಬಹುದು.

ಅನೇಕರ ಜೀವಿತದಲ್ಲಿ ಒಂದು ಧ್ಯೇಯ ಅಥವಾ ಗುರಿ ಇರುವದಿಲ್ಲ. ತಮ್ಮ ಜೀವಿತದ ಗುರಿಯನ್ನೇ ಅರಿಯದೆ ಈ ಭೂಮಿಯಲ್ಲಿ ತಮ್ಮ ಜೀವನವನ್ನು ಮುಗಿಸಿಬಿಡುವರು. ದರ್ಶನ, ಧ್ಯೇಯ ಗುರಿ ಇಲ್ಲದ ಜೀವಿತ ವಿಳಾಸವಿಲ್ಲದ ಪತ್ರದಂತೆ. ಪ್ರಿಯರೇ, ನಿಮ್ಮ ಜೀವಿತದಲ್ಲಿ ಒಂದು ದರ್ಶನವಿರಲಿ. ನಿಮ್ಮ ದರ್ಶನದೊಂದಿಗೆ ಕರ್ತನು ಸೇರಿರಲಿ. ಬಲದಿಂದಲ್ಲ, ಪರಾಕ್ರಮದಿಂದಲ್ಲ, ಕರ್ತನೇ ಎಲ್ಲವನ್ನೂ ಮಾಡಿಮುಗಿಸುವನು ಎಂದು ಆತನನ್ನು ಸ್ತುತಿಸುತ್ತಾ ಮಹಿಮೆ ಪಡಿಸುತ್ತಾ ಇರಿ. ಆಗ ನಿಶ್ಚಯವಾಗಿ ನಿಮ್ಮ ದರ್ಶನ ನೆರವೇರುವದು.

## ವಾಗ್ದಾನ ವಚನ – ಯೋವೇಲ 2:23

"ನಿಮ್ಮ ದೇವರಾದ ಯೆಹೋವನಲ್ಲಿ ಹರ್ಷಿಸಿರಿ ಉಲ್ಲಾಸಿಸಿರಿ. ಆತನು ಮುಂಗಾರನ್ನು ತಕ್ಕಹಾಗೆ ನಿಮಗೆ ಕೊಡುವನು; ಮುಂಗಾರು ಹಿಂಗಾರು ಮಳೆಗಳನ್ನು ಮೊದಲಿನಂತೆ ನಿಮಗಾಗಿ ಸುರಿಸುವನು"

## ಆಳಕ್ಕೆ ಇಳಿಯಿರಿ

ಸುವಾರ್ತಾ ಪ್ರಸಾರಣೆಯ ಪಿತಾಮಹ ಎಂದೇ ಕರೆಯಲ್ಪಡುವ ವಿಲಿಯಂ ಕೇರಿಯವರು ಭಾರತದ ಮೊದಲ ಮಿಷನರಿಯಾಗಿ 40 ಭಾರತೀಯ ಭಾಷೆಗಳಲ್ಲಿ ಸತ್ಯವೇದವನ್ನು ಭಾಷಾಂತರಿಸಿದವರು. ಭಾರತಕ್ಕೆ ಬಂದ ವಿಲಿಯಂ ಕೇರಿಯವರು ತನ್ನನ್ನು ಭಾರತಕ್ಕೆ ಕಳುಹಿಸಿದ ಇಂಗ್ಲೆಂಡ್ ದೇಶದ ಜನರಿಗೆ ಹೀಗೆ ಪತ್ರ ಬರೆದಿದ್ದರು. "ನಾನು ಭಾರತ ಎಂಬ ವಜ್ರದ ಸುರಂಗದ ಆಳದಲ್ಲಿ ಇಳಿದಿದ್ದೇನೆ. ನಾನು ನಿಮ್ಮ ಪರವಾಗಿ ಕರ್ತನ ಸೇವೆಗೆಂದು ಇಳಿದಿರುವದರಿಂದ ನನ್ನ ಸೊಂಟಕ್ಕೆ ಕಟ್ಟಿರುವ ಹಗ್ಗವನ್ನು ನೀವು ಭದ್ರವಾಗಿ ಹಿಡಿದುಕೊಳ್ಳಿರಿ. ಆ ಹಗ್ಗವೇ ನಿಮ್ಮ ಆತ್ಮಭಾರವುಳ್ಳ ಪ್ರಾರ್ಥನೆ. ಆಳಕ್ಕೆ ಇಳಿಯಿರಿ ಎಂದು ಕರ್ತನು ಕೊಡುವ ಕರೆಯೂ ಮತ್ತು ನಿಮ್ಮ ಭಾರವುಳ್ಳ ಪ್ರಾರ್ಥನೆಯೂ ವಜ್ರಕ್ಕಿಂತಲೂ ಬೆಲೆಯುಳ್ಳದ್ದು" ಎಂದು. ಹಾಗೆಯೇ ಭಾರತಕ್ಕೆ ಬಂದು ಹೇರಳವಾಗಿ ಆತ್ಮಗಳನ್ನು ಕ್ರಿಸ್ತನಿಗಾಗಿ ಆದಾಯ ಮಾಡಿದರು.

ಒಂದೇ ಒಂದು ಜೀವಿತ, ಹೊರಗಿನ ತೋರಿಕೆಗೆ ಕ್ರೈಸ್ತರಾಗಿದ್ದು ನಮ್ಮ ಜೀವಿತವನ್ನು ವ್ಯರ್ಥಮಾಡಿಕೊಳ್ಳದೆ ಕರ್ತನ ಪ್ರೀತಿಯ ಆಳಕ್ಕೆ ಇಳಿದು ಕರ್ತನಿಗಾಗಿ ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡೋಣ.

## ಮದರ್ ತೆರೆಸ್ಸಾರವರ ಪ್ರೀತಿ

ಮದರ್ ತೆರೆಸ್ಸಾರವರು ಕಲ್ವಾರಿ ಪ್ರೀತಿಯನ್ನು ಅರಿತಿದ್ದರು. ಕರ್ತನನ್ನು ಪ್ರೀತಿಸಿದುದರ ನಿಮಿತ್ತವಾಗಿ ಕುಷ್ಠರೋಗಿಗಳನ್ನೂ, ಅನಾಥ ಮಕ್ಕಳನ್ನೂ, ಪ್ರೀತಿಗಾಗಿ ಹಂಬಲಿಸುವವರನ್ನೂ ಅಪ್ಪಿಕೊಂಡು ಆದರಿಸಲು ಅವರ ಹೃದಯವು ತವಕಿಸುತ್ತಿತ್ತು. ಈ ಚಿಕ್ಕವರಲ್ಲಿ ಒಬ್ಬನಿಗೆ ನೀವು ಏನು ಮಾಡುವಿರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂಬ ಕರ್ತನ ಮಾತು ಅವರ ಹೃದಯದಲ್ಲಿ ಯಾವಾಗಲೂ ಪ್ರತಿಧ್ವನಿಸುತ್ತಿತ್ತು. ಒಮ್ಮೆ ಮದರ್ ತೆರೆಸ್ಸಾರವರು ನಡೆಸುತ್ತಿದ್ದ ಅನಾಥ ಮಕ್ಕಳಿಗೆ ಊಟ ಇಲ್ಲದ್ದರ ನಿಮಿತ್ತ ಒಂದು ದೊಡ್ಡ ಅಕ್ಕಿಯ ಅಂಗಡಿಗೆ ಹೋಗಿ ಅಕ್ಕಿ ಕೊಡು ಎಂದು ತನ್ನ ಎರಡೂ ಕೈಗಳನ್ನು ಚಾಚಿದರು. ಆದರೆ ಆ ಮಾಲೀಕನು ಕನಿಕರವಿಲ್ಲದವನು. ಕ್ರೈಸ್ತರನ್ನು ದ್ವೇಷಿಸುತ್ತಿದ್ದವನು. ತೆರೆಸ್ಸಾರವರ ಕರಗಳಲ್ಲಿ ಉಗುಳಿ ಬಿಳಿಯ ಹೆಂಗಸೇ, ಭಿಕ್ಷುಕಿಯೇ ತೊಲಗಿಹೋಗು ಎಂದು ಅಟ್ಟಿದನು.

ಅದಕ್ಕೆ ಮದರ್ ತೆರೆಸ್ಸಾರವರು ನಗುಮುಖದಿಂದ "ಈ ಎಂಜಲು ನನಗಿರಲಿ ವಂದನೆಗಳು, ಆದರೆ ಹಸಿವೆಯಿಂದಿರುವ ಮಕ್ಕಳಿಗೆ ಸಾಯುತ್ತಿರುವ ಮಕ್ಕಳಿಗೆ ಧಾನ್ಯಕೊಡು" ಎಂದು ಕೇಳಿದರು. ಇದನ್ನು ಗಮನಿಸುತ್ತಿದ್ದ ಪಕ್ಕದ ಅಂಗಡಿಯವನು ಆ ತಾಯಿಯನ್ನು ಕರೆದು ಅವರು ಕೇಳಿದಷ್ಟು ಧಾನ್ಯವನ್ನು ಸಂತೋಷದಿಂದ ಕೊಟ್ಟು ಕಳುಹಿಸಿದನು. ಮದರ್ ತೆರೆಸ್ಸಾರವರ ಹೃದಯದಲ್ಲಿ ಇಷ್ಟೊಂದು ಪ್ರೀತಿಯನ್ನಿರಿಸಿರುವ ಕರ್ತನು ತನ್ನ ಹೃದಯದಲ್ಲಿ ಇನ್ನೂ ಎಷ್ಟೋ ಅಧಿಕವಾದ ಪ್ರೀತಿಯನ್ನು ಇಟ್ಟು ಕೊಂಡಿರಬಹುದು ಅಲ್ಲವೆ. ಆತನ ಪ್ರೀತಿಯಿಂದ ತುಂಬಲ್ಪಟ್ಟು ಈ ಲೋಕಕ್ಕೆ ಆ ಪ್ರೀತಿಯನ್ನು ನಾವು ನೀಡೋಣ.



## ಅಪ್ಪಾ ತಂದೆಯೇ!

18 ವರ್ಷ ಪ್ರಾಯದ ಒಬ್ಬ ಯುವಕನು ಸಭೆಯೊಂದರಲ್ಲಿ ಸಭಾಪಾಲಕರಿಗೆ ಸೇವೆಯಲ್ಲಿ ಸಹಾಯಕನಾಗಿದ್ದು ಅಲ್ಲಿ ಬರುವಂತಹ ಎಲ್ಲರಿಗೂ ಬಹಳ ಪ್ರೀತಿ, ಆತ್ಮೀಯತೆಯನ್ನು ತೋರಿಸುತ್ತಿದ್ದನು. ಆದರೆ ಆತನ ಹಿನ್ನೆಲೆಯಾದರೋ ಬಹಳ ದುಃಖಕರವಾದದ್ದು. ಆತನ ತಾಯಿಗೆ ವಿವಾಹವಾಗುವ ಮೊದಲೇ ಒಬ್ಬನನ್ನು ಪ್ರೀತಿಸಿ ಈ ಮಗುವನ್ನು ಪಡೆದಿದ್ದಳು. ಅದರ ನಿಮಿತ್ತ ಆಕೆಯು ದೂರದ ಬಂಧುಗಳ ಬಳಿಯಲ್ಲಿದ್ದು ಅಲ್ಲಿಯೇ ಮಗುವನ್ನು ಹೆತ್ತು ಅದರ ಅಜ್ಜಿಯ ಬಳಿಯಲ್ಲಿ ಬೆಳೆಯಲು ಬಿಟ್ಟು ಬೇರೆಯವನೊಂದಿಗೆ ವಿವಾಹವಾದಳು. ಈತನಾದರೋ ಅನಾಥನಂತೆ ಬೆಳೆದನು. ತಂದೆಯಾರೋ ಗೊತ್ತಿಲ್ಲ. ತಾಯಿಯ ಪ್ರೀತಿ ದೊರೆಯಲಿಲ್ಲ. ತಾಯಿಯನ್ನು ಹುಡುಕಿ ಅಲೆದು ಬಹಳ ವರ್ಷಗಳ ನಂತರ ತಾಯಿಯನ್ನು ಕಂಡುಹಿಡಿದನು. ಆದರೆ ತಾಯಿ, ನೀನು ಇಲ್ಲಿ ಬರಬೇಡ, ನನ್ನ ಬಾಳು ಕೆಟ್ಟುಹೋಗುತ್ತದೆ ಎಂದಳು, ಮಗನನ್ನು ಓಡಿಸಿಬಿಟ್ಟಳು.

ತಾಯಿ ಕೊಟ್ಟ ವಿಳಾಸದಿಂದ ಎಷ್ಟೋ ವರ್ಷಗಳ ನಂತರ ತಂದೆಯನ್ನು ಕಂಡುಹಿಡಿದನು. ಅವರನ್ನು ಅಪ್ಪಾ ಎಂದು ಕರೆದನು. ಆಗ ಅವನು ಬಾಯಿ ಮುಚ್ಚು ನಾನು ನಿನ್ನ ತಂದೆಯೂ ಅಲ್ಲ ನೀನು ನನಗೆ ಮಗನೂ ಅಲ್ಲ ಎಂದು ಅವನೂ ಸಹ ಹೊರಗೆ ದೊಬ್ಬಿದನು. ಈ ಪರಿತಾಪಕರ ಸ್ಥಿತಿಯಲ್ಲಿ ಕರ್ತನು ಅವನನ್ನು ಸಂಧಿಸಿ ಅವನೊಂದಿಗೆ ಮೆಲುಧ್ವನಿಯಲ್ಲಿ ಮಾತನಾಡಿ ಹೇಳಿದನು. ನೀನು ಅನಾಥನಲ್ಲ, ನಾನು ನಿನಗೆ ತಂದೆಯಾಗಿದ್ದೇನೆ. ನನ್ನ ರೆಕ್ಕೆಗಳ ಮರೆಯೆ ನಿನಗೆ ಆಶ್ರಯಸ್ಥಾನ ಎಂದು ತನ್ನ ಕಲ್ವಾರಿ ಪ್ರೀತಿಯನ್ನು ಪ್ರಕಟಿಸಿದನು. ಮೊದಲನೆಯ ಸಲ ಆ ಯೌವನಸ್ಥನು ಅಪ್ಪಾ ತಂದೆಯೇ ಎಂದು ಕರ್ತನನ್ನು ಕರೆದಾಗ ಅಪರಿಮಿತವಾದ ಸಂತೋಷವು, ಹೇಳಲಸಾಧ್ಯವಾದ ಸಮಾಧಾನವು ಉಂಟಾಯಿತು. ಹೌದು ಯೇಸುಕ್ರಿಸ್ತನು ಹೇಳಿದ್ದಾನೆ. ಲೋಕವು ಕೊಡುವ ರೀತಿಯಲ್ಲಿ ಅಲ್ಲ ನನ್ನಲ್ಲಿರುವ ಸಮಾಧಾನವನ್ನು ನಿಮಗೆ ಕೊಡುವೆನು ಎಂದು.

## ನಿಮ್ಮ ಚಿಂತನೆಗಾಗಿ-1

- ಹಿಂದಿನ ಕಾಲದ ನೆನಪುಗಳಿಂದ ಮನುಷ್ಯನು ಬುದ್ಧಿವಂತನಾಗುವದಿಲ್ಲ, ಮುಂದೆ ಆಗಬೇಕಾದವುಗಳನ್ನು ಕುರಿತು ಯೋಚಿಸುವಾಗ ಬುದ್ಧಿವಂತನಾಗುತ್ತಾನೆ.
- ನೀನು ಮಾಡುವಂಥದ್ದೇ ಸರಿ ಎಂದು ವಾದಮಾಡಲು ತಿಳಿದಿರುವ ನಿನಗೆ, ಇತರರು ಹೇಳುವ ನ್ಯಾಯವಾದವುಗಳನ್ನು ನೀನು ಒಪ್ಪಲಾರೆ.
- ನಿನ್ನನ್ನು ನೀನು ತಪ್ಪಿತಸ್ಥನನ್ನಾಗಿ ನೆನಸಿಕೊಂಡು, ಇತರರ ತಪ್ಪನ್ನು ಸಹಿಸುವಿಯಾದರೆ ನೀನು ಉತ್ತಮನಾಗಿರುವಿ. ಇತರರು ನಿನ್ನನ್ನು ಸಹಿಸಬೇಕೆಂದು ಎಣಿಸಿದರೆ ನೀನು ಇತರರನ್ನು ಸಹಿಸಿಕೋ.
- ತನ್ನ ಬಗ್ಗೆ ತಾನು ಕೋಪಗೊಂಡರೂ ಇತರರ ವಿಷಯದಲ್ಲಿ ಕೋಪಗೊಳ್ಳದಿರುವದೇ ನಿಜವಾದ ತಾಳ್ಮೆ. ಅದೇ ನಿಜವಾದ ಪ್ರೀತಿ. ಈ ಸ್ಥಿತಿಗೆ ಬರಲು ನೀನು ಎಷ್ಟು ಪ್ರಯತ್ನಿಸಿರುವಿ.

## ನಿಮ್ಮ ಚಿಂತನೆಗಾಗಿ-2

- ♦ ನಿನ್ನ ತಿಳುವಳಿಕೆ ಹೆಚ್ಚಿದಂತೆಲ್ಲಾ ನಿನ್ನ ಪರಿಶುದ್ಧತೆಯೂ ಹೆಚ್ಚದಿದ್ದಲ್ಲಿ ನಿನ್ನ ಮನಸ್ಸಾಕ್ಷಿಯೇ ನಿನ್ನನ್ನು ತಪ್ಪಿತಸ್ಥನನ್ನಾಗಿ ನಿಲ್ಲಿಸುವದು.
- ♦ ಬಹಿರಂಗವಾಗಿ ಪಾಪ ಮಾಡಿ ಬಿದ್ದುಹೋದವನನ್ನು ನೀನು ಕಾಣುವಾಗ ಅವನಿಗಿಂತಲೂ ನಿನ್ನನ್ನು ನೀತಿವಂತನೆಂದು ಎಣಿಸಿಕೊಳ್ಳದಿರು.
- ♦ ತನ್ನನ್ನು ಅರಿತಿರುವವನು ಎಂದೂ ತನ್ನನ್ನು ಹೊಗಳಿಕೊಳ್ಳನು. ಇತರರು ತನ್ನನ್ನು ಹೊಗಳುವದನ್ನೂ ಬಯಸನು.
- ♦ ತನ್ನ ಆತ್ಮದ ರಕ್ಷಣೆಯ ಸಂಗತಿಗಳನ್ನು ಬಯಸದೆ ಇತರೆ ಕಾರ್ಯಗಳನ್ನು ತಿಳಿಯುವದರಲ್ಲಿ ತನ್ನ ಸಮಯವನ್ನು ಕಳೆಯುವವನು ಜಾಣನಲ್ಲ.
- ♦ ತಮ್ಮನ್ನು ಅಲ್ಪರಾದವರೆಂದು ಎಣಿಸಿ ಇತರರನ್ನು ಕುರಿತು ಉತ್ತಮರೆಂದು ಹೊಗಳಿ ಮಾತನಾಡುವದು ಎಲ್ಲಾ ಜ್ಞಾನಕ್ಕೂ ಪರಿಪೂರ್ಣತೆಗೂ ಸೂಚನೆಯಾಗಿದೆ.

## ನಾನು ಯೇಸುವಿನೊಂದಿಗೆ ನಡೆಯುತ್ತೇನೆ

ಕೊರಿಯಾ ದೇಶದಲ್ಲಿ ಏರ್ಪಡಿಸಲಾಗಿದ್ದ ಕೂಟಗಳಲ್ಲಿ ಸಂದೇಶವನ್ನು ನೀಡಲು ಅಮೇರಿಕದಿಂದ ರಾಬರ್ಟ್ ಸೂಲರ್ ಎಂಬ ಸೇವಕರು ಬಂದಿದ್ದರು. ಆ ಸಮಯದಲ್ಲಿ ಅಮೇರಿಕದಲ್ಲಿದ್ದ ಅವರ ಮಗಳು ವಿಪತ್ತಿನಲ್ಲಿ ಸಿಲುಕಿ ಅವಳ ಎರಡೂ ಕಾಲುಗಳು ತುಂಡಾಗಿ ಹೋಗಿದ್ದವು. ಇದನ್ನು ಕೇಳಿದ ಕ್ಷಣವೆ ಸೇವಕರು ಅಮೇರಿಕಾಗೆ ಹೊರಟರು. ಭಯಂಕರವಾದ ವಿಪತ್ತಿನಲ್ಲಿ ಮಗಳ ಎರಡೂ ಕಾಲುಗಳು ತುಂಡಾಗಿಹೋಗಿದ್ದವು. ಆದರೆ ಅವಳ ಜೀವ ಕಾಪಾಡಲ್ಪಟ್ಟಿತ್ತು. ಎಷ್ಟು ಭಯಂಕರವಾದ ಶೋಧನೆ ಅದು. ಕುಟುಂಬದವರ ನಂಬಿಕೆಯೇ ಅಲುಗಾಡುವಂತಹ ಸ್ಥಿತಿ. ಆದರೂ ಅವರು ಕುಟುಂಬವಾಗಿ ಕ್ರಿಸ್ತನಲ್ಲಿ ದೃಢವಾಗಿ ನಿಂತರು.

ಕೆಲವು ದಿನಗಳ ನಂತರ ನಡೆದ ಕೂಟದಲ್ಲಿ ಕಾಲುಗಳನ್ನು ಕಳೆದುಕೊಂಡ ಅವರ ಮಗಳು ರಬ್ಬರ್‌ನಿಂದ ಮಾಡಲ್ಪಟ್ಟ ಕಾಲುಗಳು ಜೋಡಿಸಿಕೊಂಡು ಕುಂಟುತ್ತಾ ಕುಂಟುತ್ತಾ ಆ ಕೂಟಕ್ಕೆ ನಡೆದುಬಂದಳು. ಅವಳು ಸಂತೋಷದಿಂದ ಹಾಡುತ್ತಿದ್ದಳು. ಹಲ್ಲೆಲೂಯ ಎಂದು ಕೂಗಿ ಹೇಳಿ ಜನರನ್ನು ನೋಡುತ್ತಾ ಇದು ನನ್ನ ನಂಬಿಕೆಗೆ ಬಂದ ಶೋಧನೆ ಆದರೂ ನಾನು ದುಃಖಪಡುವದಿಲ್ಲ. ನಾನು ಹೇಗೆ ನಡೆಯುತ್ತೇನೆ ಎಂದು ನೋಡಬೇಡಿ. ನಾನು ಯಾರೊಂದಿಗೆ ನಡೆಯುತ್ತೇನೆ ಎಂಬುದನ್ನು ನೋಡಿ. ನಾನು ಕುಂಟುತ್ತಾ ನಡೆದರೂ ಯೇಸುವಿನೊಂದಿಗೆ ನಡೆಯುತ್ತೇನೆ. ಅದೇ ನನಗೆ ಸಾಕು ಎಂದಳು. ಅವಳು ಹೇಳಿದ ಮಾತುಗಳು ಉರಿಯುತ್ತಿರುವ ಅಗ್ನಿಯಂತೆ ಜನರ ಹೃದಯಗಳಲ್ಲಿ ಶಕ್ತಿಯುತವಾಗಿ ಕ್ರಿಯೆಮಾಡಿತು. ಅನೇಕರು ಕುಂಟುತ್ತಾ ನಡೆಯುತ್ತಿದ್ದ ಜೀವಿತವನ್ನು ದೃಢಪಡಿಸಿ ನೆಟ್ಟನೆ ನಡೆದು ಯೇಸುವಿನೊಂದಿಗೆ ಸಾಗುವಂತೆ ಮಾರ್ಪಡಿಸಿತು.



## ಹಿಂಜಾರುವಿಕೆಯ ಸೂಚನೆಗಳು

* ಅಂತರಂಗ ಪ್ರಾರ್ಥನೆಯಲ್ಲಿ ಆನಂದ ಪಡದಿರುವದು – ಮತ್ತಾ. 6:6
* ಅಂತರಾತ್ಮದಿಂದ ವಾಕ್ಯದಲ್ಲಿ ಆನಂದಿಸದಿರುವದು – ರೋಮಾ. 7:22
* ಭೂಸಂಬಂಧವಾದವುಗಳಲ್ಲಿ ಮನಸ್ಸಿಡುವದು – ಕೊಲೊ. 3:2
* ಆಸಕ್ತಿಯಿಲ್ಲದೆ ಪ್ರಾರ್ಥನೆ ಮಾಡುವದು – ಯಾಕೋ. 5:16
* ಭ್ರಷ್ಟತ್ವಕ್ಕೆ ಪ್ರತಿಕ್ರಿಯೆ ತೋರದಿರುವದು – ಕೀರ್ತನೆ. 119:53

### ಇದರ ಪರಿಣಾಮಗಳು

* ದೇವರ ನಾಮಕ್ಕೆ ದೂಷಣೆಯಾಗುತ್ತದೆ – ರೋಮಾ. 2:24
* ಕ್ರಿಸ್ತನು ನಮ್ಮ ನಿಮಿತ್ತ ಅಲ್ಲಗಳೆಯಲ್ಪಡುತ್ತಾನೆ – ಮತ್ತಾ. 26:69–72
* ಪವಿತ್ರಾತ್ಮನು ದುಃಖಪಡುತ್ತಾನೆ – ಎಫೆ. 4:30,31
* ಕಠಿಣ ಹೃದಯವನ್ನು ಹೊಂದುತ್ತೇವೆ – ಇಬ್ರಿ. 3:12,13
* ಇತರರು ಮುಗ್ಗರಿಸಿ ಬೀಳುತ್ತಾರೆ – ಮಲಾಕಿ 2:8,9

## ತೀರಿಸಲು ತಡಮಾಡಬೇಡ

ಒಬ್ಬ ಸ್ತ್ರೀ ತನ್ನ ಮಗಳು ಸರ್ಕಾರದ ಉದ್ಯೋಗದ ಪರೀಕ್ಷೆಯಲ್ಲಿ ಮೊದಲನೆಯ ದರ್ಜೆಯಲ್ಲಿ ತೇರ್ಗಡೆಹೊಂದಿದರೆ ಒಂದು ಸಾವಿರ ರೂಗಳನ್ನು ಕಾಣಿಕೆ ಕೊಡುತ್ತೇನೆಂದು ಹರಕೆ ಮಾಡಿಕೊಂಡರು. ಮಗಳು ಉತ್ತಮ ಅಂಕಗಳನ್ನು ಪಡೆದು ಪಾಸಾದಳು. ಆದರೆ ಅವರಾದರೋ ಆ ಕಾಣಿಕೆಯನ್ನು ಕೊಡುವದನ್ನು ಮರೆತುಬಿಟ್ಟರು. ಒಂದು ಸಾರಿ ಅವರ ಮಗಳು ಭಯಂಕರವಾದ ವಿಪತ್ತಿಗೆ ಒಳಗಾದಳು. ಆಸ್ಪತ್ರೆಗೆ ಸೇರಿಸಲ್ಪಟ್ಟಳು. ತಕ್ಷಣ ಆಪರೇಷನ್ ಮಾಡಿದರೆ ಮಾತ್ರ ಅವಳು ಉಳಿಯುತ್ತಾಳೆ ಎಂದು ವೈದ್ಯರು ಹೇಳಿದರು. ಅವರು ಆಪರೇಷನ್‌ಗಾಗಿ ಒಂದು ಲಕ್ಷ ರೂ.ಗಳನ್ನು ತೆಗೆದುಕೊಂಡು ಆಸ್ಪತ್ರೆಗೆ ಓಡಿದಾಗ ಕರ್ತನ ಆತ್ಮನು ಅವರೊಂದಿಗೆ ಮಾತನಾಡುತ್ತಾ "ಮಗಳೇ, ಇದುವರೆಗೂ ನಿನ್ನ ಮಗಳಿಗೆ ಜೀವ, ಸುಖ, ಬಲ, ಆರೋಗ್ಯವನ್ನು ಕೊಟ್ಟು ಕಾಪಾಡಿದೆನು. ಆದರೂ ನಿನಗೆ ನೀನು ಹರಕೆ ಮಾಡಿಕೊಂಡ ಸಾವಿರ ರೂಗಳನ್ನು ಕೊಡಲು ಮನಸ್ಸು ಬರಲಿಲ್ಲ. ಈಗ ಲಕ್ಷ ರೂಗಳನ್ನು ತೆಗೆದುಕೊಂಡು ಓಡುತ್ತೀಯಲ್ಲಾ" ಎಂದನು.

**ನೀನು ದೇವರಿಗೆ ಹರಕೆಯನ್ನು ಕಟ್ಟಿದರೆ ಅದನ್ನು ತೀರಿಸಲು ತಡಮಾಡಬೇಡ (ಪ್ರಸಂ. 5:4–5).**

# ನಮ್ಮ ದೇಶದ ಸುದ್ದಿಗಳು
## (INDIAN NEWS)

### 1. ದೆಹಲಿ ಏರ್‌ಪೋರ್ಟ್ ವಿಶ್ವದ ನಂ.2 :

ಜಗತ್ತಿನ ಶ್ರೇಷ್ಠ ವಿಮಾನ ನಿಲ್ದಾಣಗಳ ಪಟ್ಟಿಯಲ್ಲಿ ದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಸತತ ಮೂರನೇ ಬಾರಿಗೆ ದ್ವಿತೀಯ ಸ್ಥಾನ ಪಡೆದಿದೆ. ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಸಮಿತಿಯು ಪ್ರತೀ ವರ್ಷದಂತೆ ಸೇವೆಯ ಗುಣಮಟ್ಟದ ಆಧಾರದಲ್ಲಿ ಈ ಪಟ್ಟಿಯನ್ನು ಬಿಡುಗಡೆ ಮಾಡಿದ್ದು ಮುಂಬೈನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಐದನೇ ಸ್ಥಾನ ಪಡೆದಿದೆ.

### 2. ಶತಮಾನದ ಅತಿದೊಡ್ಡ ರಕ್ಷಣಾ ಡೀಲ್ :

ಈ ಶತಮಾನದ ಬೃಹತ್ ರಕ್ಷಣಾ ಒಪ್ಪಂದ ಭಾರತ ಮತ್ತು ಫ್ರಾನ್ಸ್ ಮಧ್ಯೆ ನಿಗದಿಯಾಗಿದ್ದು ಇನ್ನು ಕೆಲ ತಿಂಗಳೊಳಗೆ ಎರಡೂ ದೇಶಗಳು ಡೀಲ್‌ಗೆ ಸಹಿ ಹಾಕಲಿವೆ. 50 ಸಾವಿರ ಕೋಟಿ ರೂ. ಮೊತ್ತದ ಈ ರಕ್ಷಣಾ ಒಪ್ಪಂದದಲ್ಲಿ ಭಾರತಕ್ಕೆ ಫ್ರಾನ್ಸ್ 126 ಮಧ್ಯಮ ಪ್ರಮಾಣದ ಬಹು ಉಪಯೋಗಿ ಯುದ್ಧ ವಿಮಾನಗಳನ್ನು ಪೂರೈಸಲಿದೆ.

### 3. ಚೀನಾಗಡಿಯಲ್ಲಿ 54 ಹೊಸ ಠಾಣೆ :

ದೇಶದ ಭದ್ರತೆಗೆ ಮೊದಲ ಪ್ರಾಶಸ್ತ್ಯ ನೀಡಿರುವ ಕೇಂದ್ರ ಸರ್ಕಾರವು ಅರುಣಾಚಲ ಪ್ರದೇಶ ಹಾಗೂ ಚೀನಾ ಗಡಿಯಲ್ಲಿ ಇಂಡೋ ಟಿಬೇಟಿಯನ್ ಬಾರ್ಡರ್ ಪೋಲೀಸ್‌ನ 54 ಹೊಸ ಠಾಣೆಗಳನ್ನು ಸ್ಥಾಪಿಸಲು ಮುಂದಾಗಿದೆ. ಇವು ಅತ್ಯಾಧುನಿಕ ರಕ್ಷಣಾ ಸಾಮಗ್ರಿ ಸ್ಯಾಟಲೈಟ್ ಸಂಪರ್ಕ ಹೊಂದಿರಲಿವೆ.

### 4. ಅಂಗವಿಕಲ ಮಕ್ಕಳ ಪಾಲಕರಿಗೆ ವರ್ಗಾವಣೆ ಇಲ್ಲ :

ಅಂಗವಿಕಲ ಮಕ್ಕಳನ್ನು ಹೊಂದಿರುವ ಸರ್ಕಾರಿ ನೌಕರರಿಗೆ ವರ್ಗಾವಣೆಯಿಂದ ವಿನಾಯಿತಿ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಮಕ್ಕಳ ಚಿಕಿತ್ಸೆ ಮತ್ತು ಪಾಲನೆ ಪಾಲಕರಿಗೆ ಹೊರೆಯಾಗುವದನ್ನು ಮನಗಂಡು ಸರ್ಕಾರವು ಈ ಮಹತ್ವದ ನಿರ್ಧಾರ ಕೈಗೊಂಡಿದೆ.

### 5. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಮನೆ ನವೀಕರಣ :

1914ರಲ್ಲಿ ಸತ್ಯಾಗ್ರಹದ ಸಂದರ್ಭದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಮಹಾತ್ಮ ಗಾಂಧಿಯವರು ನೆಲೆಸಿದ್ದ ಮನೆ ನವೀಕರಣಗೊಳ್ಳಲಿದ್ದು, ಗಾಂಧಿ ನೆಲೆಸಿದ್ದ ಟಾಲ್‌ಸ್ಟಾಯ್ ಫಾರ್ಮ್ ನವೀಕರಣಕ್ಕೆ ಮಧ್ಯಪ್ರದೇಶ ಸರ್ಕಾರದ ವತಿಯಿಂದ 1 ಕೋಟಿ ರೂ. ದೇಣಿಗೆ ನೀಡುವದಾಗಿ ಮಧ್ಯಪ್ರದೇಶ ಮುಖ್ಯಮಂತ್ರಿಯವರು ತಿಳಿಸಿದ್ದಾರೆ.





# ಹೊರ ದೇಶದ ಸುದ್ದಿಗಳು
## (FOREIGN NEWS)

### 1. ಜಗತ್ತಿನಲ್ಲಿ ಐದುಕೋಟಿ ನಿರಾಶ್ರಿತರು : ವಿಶ್ವಸಂಸ್ಥೆ :

ಎರಡನೇ ಜಾಗತಿಕ ಯುದ್ಧದ ನಂತರ ಇದೇ ಮೊದಲ ಬಾರಿಗೆ ಜಗತ್ತಿನಲ್ಲಿರುವ ನಿರಾಶ್ರಿತರ ಸಂಖ್ಯೆ ಐದುಕೋಟಿ ದಾಟಿದೆ ಎಂದು ವಿಶ್ವಸಂಸ್ಥೆಯ ನಿರಾಶ್ರಿತರ ಸಂಸ್ಥೆಯು ಹೇಳಿದೆ. ಸಿರಿಯಾದಲ್ಲಿ ಜಗತ್ತಿನಲ್ಲಿಯೇ ಅತಿಹೆಚ್ಚು ನಿರಾಶ್ರಿತರಿದ್ದಾರೆ ಎಂದು ತನ್ನ ವಾರ್ಷಿಕ ವರದಿಯಲ್ಲಿ ಪ್ರಕಟಿಸಿದೆ.

### 2. ಮತದಾರರ ಬೆರಳು ಕತ್ತರಿಸಿದ ತಾಲಿಬಾನಿಗಳು :

ಅಫ್ಘಾನಿಸ್ಥಾನದಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯ ಎರಡನೇ ಹಂತದ ಮತದಾನದಲ್ಲಿ ಪಾಲ್ಗೊಂಡ 11 ಮಂದಿಯ ಬೆರಳುಗಳನ್ನು ತಾಲಿಬಾನ್ ಉಗ್ರರು ಕತ್ತರಿಸಿದ್ದಾರೆ. ಮತದಾನ ಮಾಡದಂತೆ ತಾಕೀತು ಮಾಡಿದ್ದ ಉಗ್ರರು ಮತದಾನದ ಶಾಹಿ ಗುರುತು ಹಾಕಿದ್ದ ಬೆರಳುಗಳನ್ನೇ ನಿರ್ದಾಕ್ಷಿಣ್ಯವಾಗಿ ಕತ್ತರಿಸಿದ್ದಾರೆ. ಇದರ ನಡುವೆಯೂ ಶೇಕಡ 52 ರಷ್ಟು ಪ್ರಮಾಣದಲ್ಲಿ ಮತದಾನ ನಡೆದಿದೆ.

### 3. ಆಸೀಸ್‌ಗೆ ವಿಶ್ವ ಚಾಂಪಿಯನ್ ಪಟ್ಟ :

ನಿರ್ಣಾಯಕ ಪಂದ್ಯದಲ್ಲಿ ಅತ್ಯಮೋಘ ಪ್ರದರ್ಶನ ನೀಡಿದ ಆಸ್ಟ್ರೇಲಿಯಾ ತಂಡದವರು ವಿಶ್ವಕಪ್ ಪುರುಷರ ಹಾಕಿ ಟೂರ್ನಿಯಲ್ಲಿ ಜಯಭೇರಿ ಬಾರಿಸುವದರ ಮೂಲಕ ಸತತವಾಗಿ ಎರಡನೇ ಬಾರಿಗೆ ಪ್ರಶಸ್ತಿ ಎತ್ತಿಹಿಡಿದ ಹೆಗ್ಗಳಿಕೆಗೆ ಪಾತ್ರವಾಗಿದೆ.

### 4. ಚೀನಾ ಮಾಂಸ ಉತ್ಸವ 2 ಸಾವಿರ ನಾಯಿಗಳು ಬಲಿ :

ದಕ್ಷಿಣ ಚೀನಾದಲ್ಲಿ ಒಂದು ವಿಚಿತ್ರ ಉತ್ಸವ ನಡೆದಿದ್ದು, ಅದು ನಾಯಿ ಮಾಂಸ ಉತ್ಸವವಾಗಿದೆ. ಇದಕ್ಕಾಗಿ 2000 ನಾಯಿಗಳನ್ನು ಸಂಹಾರ ಮಾಡಲಾಗಿದೆ. ಆದರೆ ಈ ಉತ್ಸವಕ್ಕೆ ಪ್ರಾಣಿದಯಾ ಸಂಘಗಳಿಂದ ಭಾರಿ ವಿರೋಧ ವ್ಯಕ್ತವಾಗಿದೆ. ಯೂಲಿನ್ ನಗರದಲ್ಲಿ ಬೇಸಿಗೆ ಸಂಕ್ರಮಣದ ನೆನಪಿಗಾಗಿ ಈ ಉತ್ಸವವನ್ನು ನಡೆಸಲಾಗುತ್ತದೆ.

### 5. 57 ಪೈಸೆ ಅಂಚೆ ಚೀಟಿಗೆ ರೂ. 57 ಕೋಟಿ :

“ಅಂಚೆ ಚೀಟಿ ಜಗತ್ತಿನ ಮೊನಾಲಿಸ” ಎಂಬ ಖ್ಯಾತಿಯ ಒಂದು ಸೆಂಟ್ ಬೆಲೆಯ (ಸುಮಾರು 57 ಪೈಸೆ) ಅಂಚೆ ಚೀಟಿ ದಾಖಲೆಯ ಸುಮಾರು ರೂ. 57 ಕೋಟಿಗಳಿಗೆ (95 ಲಕ್ಷ ಡಾಲರ್) ಮಾರಾಟವಾಗಿದೆ. ಹರಾಜಿನಲ್ಲಿ ಅತ್ಯಂತ ದುಬಾರಿ ಬೆಲೆಗೆ ಮಾರಾಟವಾದ ಅಂಚೆ ಚೀಟಿ ಎಂಬ ಹೆಬ್ಬಳಿಕೆಗೆ ಇದು ಪಾತ್ರವಾಗಿದೆ.

ಆಗಸ್ಟ್ 1

# ಎಂಥವನಾದರೂ!

ಬೆಳಿಗ್ಗೆ : ಕೀರ್ತನೆ 57,58,59
ಸಂಜೆ : ರೋಮಾ. 4

[illegible]



ಆಗಸ್ಟ್ 2

# ಹೆಸರಿನಂತೆಯೇ!

ಬೆಳಿಗ್ಗೆ : ಕೀರ್ತನೆ 60,61,62
ಸಂಜೆ : ರೋಮಾ. 5

ಅವನ ಹೆಸರು ನಾಬಾಲ್. ಅದಕ್ಕೆ ತಕ್ಕಂತೆ ಅವನು ಮೂರ್ಖನೇ ಆಗಿರುತ್ತಾನೆ (1 ಸಮು. 25:25).

ಸತ್ಯವೇದದಲ್ಲಿ ನಾಬಾಲ್ ಎಂಬ ಒಬ್ಬ ಮನುಷ್ಯನಿದ್ದನು. ನಾಬಾಲ್ ಎಂದರೆ ಮೂರ್ಖನೆಂದು ಅರ್ಥ. ಅವನ ತಂದೆ ತಾಯಿಗಳು ಅವನಿಗೆ ಯಾವಕಾರಣದಿಂದ ಆ ಹೆಸರಿಟ್ಟರೋ ತಿಳಿಯದು. ಅವನನ್ನು ಕುರಿತು ಅವನ ಹೆಂಡತಿಯಾದ ಅಬಿಗೈಲಳು ಕೊಟ್ಟ ಸಾಕ್ಷಿ ಏನು?" ಸ್ವಾಮಿಯು ಮೂರ್ಖನಾದ ಆ ನಾಬಾಲನನ್ನು ಲಕ್ಷಿಸದಿರಲಿ. ಅವನ ಹೆಸರು ನಾಬಾಲ್. ಅದಕ್ಕೆ ತಕ್ಕಂತೆ ಅವನು ಮೂರ್ಖನೇ ಆಗಿರುತ್ತಾನೆ" ಅಂದಳು (1 ಸಮು. 25:25).

ಸಾಧಾರಣವಾಗಿ, ಹೆತ್ತವರು ಒಂದು ರೀತಿಯ ನಿರೀಕ್ಷೆಯಿಂದ ಅರ್ಥಗರ್ಭಿತವಾದ ಹೆಸರುಗಳನ್ನು ತಮ್ಮ ಮಕ್ಕಳಿಗೆ ಇಡುತ್ತಾರೆ. ಆದಾಮನಿಗೆ ಒಂಬತ್ತನೆಯ ತಲೆಯಾದ ಲೆಮೆಕನಿಗೆ ಒಬ್ಬ ಮಗನು ಹುಟ್ಟಿದಾಗ ಯೆಹೋವನು ಶಪಿಸಿದ ಭೂಮಿಯಿಂದ ನಮಗೆ ಉಂಟಾದ ಕೈ ಕಷ್ಟದಲ್ಲಿಯೂ ಶ್ರಮೆಯಲ್ಲಿಯೂ ಈ ಮಗನು ನಮ್ಮನ್ನು ಉಪಶಮನಗೊಳಿಸುವನು ಎಂದು ಹೇಳಿ ಅವನಿಗೆ ನೋಹ ಎಂದು ಹೆಸರಿಟ್ಟನು (ಆದಿ 5:29). ಯಾಕೋಬನ ಹಿರಿಯ ಹೆಂಡತಿಯಾದ ಲೇಯಳು ಮೊದಲ ಮಗನನ್ನು ಹೆತ್ತಾಗ, ಯೆಹೋವನು ನನ್ನ ವ್ಯಥೆಯನ್ನು ನೋಡಿದ್ದಾನೆ. ಇನ್ನು ಮುಂದೆ ನನ್ನ ಗಂಡನು ನನ್ನನ್ನು ಪ್ರೀತಿಸುವನು ಎಂದು ಹೇಳಿ ಅದಕ್ಕೆ ರೂಬೇನ್ ಎಂದು ಹೆಸರಿಟ್ಟಳು (ಆದಿ. 29:32). ಯೋಸೇಫನು ಓನ್ ಪಟ್ಟಣದ ಆಚಾರ್ಯನಾದ ಪೋಟಿಫರನ ಮಗಳಾದ ಆಸನತ್ ಎಂಬಾಕೆಯನ್ನು ಮದುವೆಯಾಗಿ ಚೊಚ್ಚಲ ಮಗನನ್ನು ಪಡೆದಾಗ ನಾನು ನನ್ನ ಎಲ್ಲಾ ಕಷ್ಟವನ್ನೂ ತಂದೆಯ ಮನೆಯವರನ್ನು ಮರೆತುಬಿಡುವಂತೆ ದೇವರು ಮಾಡಿದ್ದಾನಲ್ಲಾ ಎಂದು ಹೇಳಿ ಅವನಿಗೆ ಮನಸ್ಸೆ ಎಂದು ಹೆಸರಿಟ್ಟನು. ಎರಡನೆಯ ಮಗನು ಹುಟ್ಟಿದಾಗ ನನಗೆ ಸಂಕಟ ಬಂದ ದೇಶದಲ್ಲೇ ದೇವರು ಅಭಿವೃದ್ಧಿಯನ್ನು ದಯಪಾಲಿಸಿದ್ದಾನೆಂದು ಹೇಳಿ ಆ ಮಗನಿಗೆ ಎಫ್ರಾಯಿಮ್ ಎಂದು ಹೆಸರಿಟ್ಟನು.

ದೇವರ ಮಕ್ಕಳೇ, ನಿಮ್ಮ ಮಕ್ಕಳಿಗೆ ಹೆಸರಿಡುವಾಗ, ಆಶೀರ್ವಾದದಾಯಕವಾದ ಹೆಸರುಗಳನ್ನು ಇಡಿರಿ. ಸತ್ಯವೇದದಲ್ಲಿರುವ ಹೆಸರುಗಳನ್ನಿಡಿರಿ. ಭಯಭಕ್ತಿಯಿಂದ ಪ್ರಾರ್ಥನಾ ಪೂರ್ವಕವಾಗಿ, ನಿರೀಕ್ಷೆಯಿಂದ ಕೂಡಿದವರಾಗಿ ಹೆಸರಿಡಿರಿ.

*ನೆನಪಿಗೆ : ಹೀಗಿರಲಾಗಿ, ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು (2 ಕೊರಿಂ. 5:17).*

ಆಗಸ್ಟ್ 3

## ಸ್ನಾನಿಕನಾದ ಯೋಹಾನನು!

ಬೆಳಿಗ್ಗೆ : ಕೀರ್ತನೆ 63,64,65
ಸಂಜೆ : ರೋಮಾ. 6

ನೀನು ಅವನಿಗೆ ಯೋಹಾನನೆಂದು ಹೆಸರಿಡಬೇಕು. ನಿನಗೆ ಸಂತೋಷವೂ, ಉಲ್ಲಾಸವೂ ಉಂಟಾಗುವದು ಮತ್ತು ಅವನು ಹುಟ್ಟಿದ್ದಕ್ಕೆ ಬಹುಜನರು ಸಂತೋಷಪಡುವರು (ಲೂಕ.1:14).

ಹುಟ್ಟುವ ಮೊದಲೇ ಹೆಸರು ಇಟ್ಟವರಲ್ಲಿ ಸ್ನಾನಿಕನಾದ ಯೋಹಾನನೂ ಒಬ್ಬನು. ದೀರ್ಘಕಾಲ ಬಂಜೆಯಾಗಿದ್ದ ಎಲಿಜಬೆತ್ ಜಕರಿಯ ದಂಪತಿಗಳ ಮೇಲೆ ಕರ್ತನು ಕನಿಕರಗೊಂಡು ಯೋಹಾನನನ್ನು ಅವರಿಗೆ ಕೊಟ್ಟನು. ಯೋಹಾನನಿಗೆ ಕರ್ತನು ನೇಮಿಸಿದ ಸೇವೆ ದೀಕ್ಷಾಸ್ನಾನ ಕೊಡುವ ಸೇವೆ. ಯೋಹಾನನು ತನ್ನ ಕರೆಯಲ್ಲಿ ಯಥಾರ್ಥನೂ, ಸತ್ಯವಂತನೂ, ಉತ್ತಮನೂ ಆಗಿದ್ದನು. ಅವನು ಸೇವೆ ಮಾಡಿದ ಅವಧಿ ಸುಮಾರು ಆರು ತಿಂಗಳುಗಳು.

ಅದಕ್ಕೆ ಆ ಆರು ತಿಂಗಳುಗಳ ಮೊದಲು ಹಲವು ವರ್ಷಗಳು ಅವನು ಅರಣ್ಯ ವಾಸಿಯಾಗಿದ್ದನು. ಒಂದು ನಿರೀಕ್ಷೆಯಿಂದ ಕರ್ತನಿಗಾಗಿ ಕಾದಿದ್ದನು. ಯೋಹಾನನ ಕುರಿತು ಕರ್ತನ ನಿರೀಕ್ಷೆ ಏನು? ಕರ್ತನು ಅವನ ತಂದೆಯಾದ ಜಕರಿಯನಿಗೆ "ನಿನಗೆ ಸಂತೋಷವೂ ಉಲ್ಲಾಸವೂ ಉಂಟಾಗುವದು ಮತ್ತು ಅವನು ಹುಟ್ಟಿದ್ದಕ್ಕೆ ಬಹು ಜನರು ಸಂತೋಷಪಡುವರು" ಎಂದು ಹೇಳಿದನು. ಮಕ್ಕಳು ಯಾವಾಗಲೂ ತಂದೆ ತಾಯಿಗಳನ್ನು ಸಂತೋಷಪಡಿಸಬೇಕು. "ಮಗನು ಜ್ಞಾನಿಯಾದರೆ ತಂದೆಗೆ ಸುಖ" (ಜ್ಞಾನೋಕ್ತಿ 10:1). ಅಪೊ. ಪೌಲನು ಎಫೆಸದ ಸಭೆಗೆ ಬರೆಯುವಾಗ ಮಕ್ಕಳೇ, ನಿಮ್ಮ ತಂದೆ ತಾಯಿಗಳನ್ನು ಸನ್ಮಾನಿಸಬೇಕು. ಸನ್ಮಾನಿಸಿದರೆ ನಿನಗೆ ಮೇಲಾಗುವದು, ನೀನು ಭೂಮಿಯ ಮೇಲೆ ಬಹುಕಾಲ ಬದುಕುವಿ" ಎಂದು ಬರೆಯುತ್ತಾನೆ (ಎಫೆ. 6:1–3). ಒಬ್ಬ ಸ್ತ್ರೀ ಮಗುವನ್ನು ಪ್ರಸವಿಸುವಾಗ ಆಕೆ ಮರಣದ ಕಣಿವೆಯನ್ನೇ ದಾಟಿ ಬರುವಂತಿರುವದು. ಜೀವವಾ? ಸಾವಾ? ಎಂದು ತಿಳಿಯದೆ ಅವಳು ವೇದನೆಗೆ ಒಳಗಾಗುವಳು. ಮಗು ಜನಿಸಿದ ಕೂಡಲೆ ಅದರ ಮುಖವನ್ನು ನೋಡುವಾಗ ತಾನು ಅನುಭವಿಸಿದ ವೇದನೆಯನ್ನೆಲ್ಲಾ ಮರೆಯುವಳು.

ದೇವಮಕ್ಕಳೇ, ನಿಮಗಾಗಿ ಎಷ್ಟೋ ವೇದನೆ ಕಷ್ಟಗಳನ್ನು ಅನುಭವಿಸುವ ಸಹಿಸುವ ನಿಮ್ಮ ಹೆತ್ತವರಿಗೆ ವಿಧೇಯರಾಗಿ ಅವರನ್ನು ಯಾವಾಗಲೂ ಸಂತೋಷಪಡಿಸಿರಿ. ತಂದೆ ತಾಯಿಗಳು ಕರ್ತನು ನಿಮಗೆ ಕೊಟ್ಟಿರುವ ಉಡುಗೊರೆಯಾಗಿದೆ. ನಿಮಗಾಗಿ ನೀವು ಸ್ನೇಹಿತರನ್ನು ಆರಿಸಿಕೊಳ್ಳಬಹುದು. ಹೆಂಡತಿ ಅಥವಾ ಗಂಡನನ್ನು ಆರಿಸಿಕೊಳ್ಳಬಹುದು. ಆದರೆ ಹೆತ್ತವರನ್ನು ನೀವು ಆರಿಸಿಕೊಳ್ಳಲು ಸಾಧ್ಯವಿಲ್ಲ. ಕರ್ತನು ತಾನೇ ನಿಮಗಾಗಿ ತಂದೆ ತಾಯಿಗಳನ್ನು ನಿಯಮಿಸಿಕೊಟ್ಟಿರುವನು.

*ನೆನಪಿಗೆ : ಕಂದಾ ತಂದೆಯ ಆಜ್ಞೆಯನ್ನು ಕೈಕೊಳ್ಳು. ತಾಯಿಯ ಉಪದೇಶವನ್ನು ಬಿಡಬೇಡ (ಜ್ಞಾನೋ. 6:20).*



ಆಗಸ್ಟ್ 4

## ಇಸಾಕನು!

ಬೆಳಿಗ್ಗೆ : ಕೀರ್ತನೆ 66,67
ಸಂಜೆ : ರೋಮಾ. 7

ನಿನ್ನ ಪತ್ನಿಯಾದ ಸಾರಾಳಲ್ಲಿಯೇ ನಿನ್ನಿಂದ ಮಗನು ಹುಟ್ಟುವನು. ಅವನಿಗೆ ಇಸಾಕನೆಂದು ಹೆಸರಿಡಬೇಕು. ಅವನ ಸಂಗಡ ನನ್ನ ಒಡಂಬಡಿಕೆಯನ್ನು ಸ್ಥಾಪಿಸಿಕೊಳ್ಳುವೆನು; ಅದು ಅವನ ಸಂತತಿಯವರಲ್ಲಿಯೂ ಶಾಶ್ವತವಾಗಿರಬೇಕು (ಆದಿ. 17:19).

ಕರ್ತನು ಅಬ್ರಹಾಮನಿಗೆ ಇಸಾಕನು ಹುಟ್ಟುವ ಮೊದಲೇ ಅವನ ಹೆಸರನ್ನು ತಿಳಿಯಪಡಿಸಿದನು. ಮಾತ್ರವಲ್ಲ ಅವನ ಸಂಗಡ ತನ್ನ ಒಡಂಬಡಿಕೆಯನ್ನು ಸ್ಥಾಪಿಸುವೆನು ಅಂದನು. ಕರ್ತನು ಒಡಂಬಡಿಕೆಯ ದೇವರು. ಒಡಂಬಡಿಕೆಯನ್ನು ಕಾಪಾಡಲು ಸತ್ಯವಂತನಾಗಿರುವನು. ತಾನು ಮಾಡಿಕೊಂಡ ಒಡಂಬಡಿಕೆಯನ್ನು ಆತನು ನಿಶ್ಚಯವಾಗಿ ನೆರವೇರಿಸುವನು.

ಕರ್ತನ ಒಡಂಬಡಿಕೆ ಏನು? ನೀನು ನನ್ನವನು, ನಾನು ನಿನ್ನವನು ಎಂಬುದೇ. ನೀವು ನೂರಕ್ಕೆ ನೂರರಷ್ಟು ನಿಮ್ಮನ್ನು ಕರ್ತನಿಗೆ ಒಪ್ಪಿಸಿಕೊಟ್ಟು ಒಡಂಬಡಿಕೆ ಮಾಡುವಾಗ, ಆತನು ನೂರಕ್ಕೆ ನೂರರಷ್ಟು ನಿಮ್ಮ ಜವಾಬ್ದಾರಿಯನ್ನು ಹೊತ್ತು ನಿಮ್ಮನ್ನು ನಡೆಸುವನು. ಒಂದು ದಿನವಾದರೂ ನಿಮ್ಮನ್ನು ಬಿಟ್ಟು ಅಗಲುವದಿಲ್ಲ. ನಿಮ್ಮನ್ನು ಕೈಬಿಡುವದಿಲ್ಲ. ಹಳೆಯ ಒಡಂಬಡಿಕೆಯಲ್ಲಿ ಅಬ್ರಹಾಮನ ಸಂತತಿಯಾದ ಇಸಾಕನೊಂದಿಗೆ ಮಾಡಿಕೊಂಡ ಒಡಂಬಡಿಕೆ ಸುನ್ನತಿ. ಅದು ದೇವಜನರೆಂಬುದಕ್ಕೆ ಗುರುತು. ಆದರೆ ಸುನ್ನತಿಯೆಂಬ ಗುರುತು ಹಳೆಯ ಒಡಂಬಡಿಕೆಯೊಂದಿಗೆ ಮುಗಿದುಹೋಯಿತು. ಒಮ್ಮೆ ಯೆಹೂದ್ಯರು ಯೇಸುವನ್ನು ನೋಡಿ ನಾವು ಅಬ್ರಹಾಮನ ಸಂತಾನದವರು. ನಾವು ಯಾರಿಗೂ ಎಂದೂ ದಾಸರಾಗಿಲ್ಲ. ನಿಮಗೆ ಬಿಡುಗಡೆಯಾಗುವದು ಎಂದು ನೀನು ಹೇಳುವದು ಹೇಗೆ? ಅಂದರು. ಅದಕ್ಕೆ ಯೇಸು ಪಾಪಮಾಡುವವರೆಲ್ಲರೂ ಪಾಪಕ್ಕೆ ದಾಸರಾಗಿರುವರು. ಅವನು ಸುನ್ನತಿ ಮಾಡಿಸಿಕೊಂಡಿದ್ದರೂ ಪಾಪಿಯಾಗಿರುವದರಿಂದ ಅವನು ದಾಸನೇ. ಪಾಪದ ಹಿಂದೆ ಸೈತಾನನು ಇರುವದರಿಂದ ಈ ಪಾಪದ ದಾಸತ್ವ ಅವನನ್ನು ನರಕಕ್ಕೆ ತಳ್ಳುವದು. ಅಂದನು. ಹೊಸ ಒಡಂಬಡಿಕೆಯಲ್ಲಿ ನಮ್ಮ ಕರ್ತನು ತನ್ನ ಅಮೂಲ್ಯವಾದ ರಕ್ತದ ಮೂಲಕ ನಮ್ಮೊಂದಿಗೆ ಹೊಸ ಒಡಂಬಡಿಕೆ ಮಾಡಿಕೊಂಡಿರುವನು. ಆ ಒಡಂಬಡಿಕೆ ಶಾರೀರಿಕವಾದ ಸುನ್ನತಿ ಅಲ್ಲ. ಅದು ಆತ್ಮೀಕವಾದ ಸುನ್ನತಿಯೆಂಬ ಒಡಂಬಡಿಕೆ. ಆ ಒಡಂಬಡಿಕೆ ಏನೆಂದರೆ "ನನ್ನ ಆಜ್ಞೆಗಳನ್ನು ಅವರ ಮನಸ್ಸಿನಲ್ಲಿ ಇಡುವೆನು. ಅವರ ಹೃದಯದ ಮೇಲೆ ಅವುಗಳನ್ನು ಬರೆಯುವೆನು. ನಾನು ಅವರಿಗೆ ದೇವರಾಗಿರುವೆನು. ಅವರು ನನಗೆ ಪ್ರಜೆಯಾಗಿರುವರು" ಎಂಬುದೇ (ಇಬ್ರಿ. 8:10).

ದೇವಮಕ್ಕಳೇ, ಕರ್ತನಿಗೆ ವಿರೋಧವಾಗಿ ಪಾಪ ಮಾಡದಂತೆ ಆತನ ಆಜ್ಞಾವಿಧಿಗಳನ್ನು ಹೃದಯದಲ್ಲಿ ಇಟ್ಟುಕೊಳ್ಳಿರಿ. ನಿತ್ಯಜೀವದ ಬಾಧ್ಯತೆಯನ್ನು ಪಡೆದುಕೊಳ್ಳಿರಿ.

*ನೆನಪಿಗೆ : ನಿನಗೆ ವಿರೋಧವಾಗಿ ಪಾಪ ಮಾಡದಂತೆ, ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿ ಇಟ್ಟುಕೊಂಡಿದ್ದೇನೆ (ಕೀರ್ತ. 119:11).*

ಆಗಸ್ಟ್ 5

## ಸೊಲೊಮೋನನು!

ಬೆಳಿಗ್ಗೆ : ಕೀರ್ತನೆ 68,69
ಸಂಜೆ : ರೋಮಾ. 8:1–17

ನಿನಗೆ ಒಬ್ಬ ಮಗನು ಹುಟ್ಟುವನು; ಅವನು ಸಮಾಧಾನ ಪುರುಷನಾಗಿರುವನು. ನಾನು ಅವನ ಸುತ್ತಣ ಎಲ್ಲಾ ವೈರಿಗಳನ್ನು ಅಣಗಿಸಿ ಅವನಿಗೆ ಸಮಾಧಾನವನ್ನು ಅನುಗ್ರಹಿಸುವೆನು. ಅವನಿಗೆ ಸೊಲೊಮೋನನೆಂಬ ಹೆಸರಿರುವದು (1 ಪೂ.ವೃ. 22:9).

ಜನಿಸುವ ಮೊದಲೇ ಕರ್ತನು ಹೆಸರಿಟ್ಟವರಲ್ಲಿ ಸೊಲೊಮೋನನೂ ಒಬ್ಬನು. ಸೊಲೊಮೋನ ಎಂದರೆ ಸಮಾಧಾನ ಉಳ್ಳವನು, ವಿಶ್ರಮಿಸುವವನು, ಶಾಂತಗುಣವುಳ್ಳವನು ಎಂದು ಅರ್ಥ. ಈ ಪ್ರಪಂಚದಲ್ಲಿ ಅನೇಕರು ಕೋಪವುಳ್ಳವರಾಗಿರುತ್ತಾರೆ. ಆದರೆ ಕರ್ತನಾದರೋ, ತನ್ನ ಮಕ್ಕಳು ಯಾವಾಗಲೂ ಸಮಾಧಾನದಿಂದಿರಬೇಕೆಂದು ಬಯಸುತ್ತಾನೆ. ನನ್ನ ಜನರು ಸಮಾಧಾನ ನಿವಾಸದಲ್ಲಿಯೂ, ನಿರ್ಭಯ ನಿಲಯಗಳಲ್ಲಿಯೂ, ನೆಮ್ಮದಿಯ ಆಶ್ರಯಗಳಲ್ಲಿಯೂ ನೆಲೆಗೊಳ್ಳುವರು (ಯೆಶಾ. 32:18) ಎಂದು ಸತ್ಯವೇದ ಹೇಳುತ್ತದೆ.

ಕರ್ತನಿಗೆ ನಿಮ್ಮನ್ನು ಕುರಿತು ನಿಮ್ಮ ಕುಟುಂಬವನ್ನು ಕುರಿತು ಒಂದು ನಿರೀಕ್ಷೆ ಉಂಟು. ನಿಮ್ಮ ಕುಟುಂಬದಲ್ಲಿ ಸಮಾಧಾನ ಇರುವದಾದರೆ ಸಮಾಧಾನದ ಪ್ರಭುವಾದ ಯೇಸುಕ್ರಿಸ್ತನು ಅಲ್ಲಿ ವಾಸ ಮಾಡಬೇಕು. ಕೆಲವು ಮನೆಗಳಲ್ಲಿ ಬೆಳಗಿನಿಂದ ರಾತ್ರಿಯವರೆಗೂ ಜಗಳ, ಗಲಾಟೆ, ಕೂಗಾಟಗಳೇ ಇರುತ್ತವೆ. ಮನೆಯಲ್ಲಿನ ಜಗಳ ಬೀದಿಯವರೆಗೂ ಕೇಳಿಸುವಂತೆ ಕೂಗಾಡುವರು. “ಮನೆಯಲ್ಲಿ ಜಗಳಗಂಟಿಯ ಜೊತೆಯಲ್ಲಿರುವದಕ್ಕಿಂತಲೂ ಮಾಳಿಗೆಯ ಒಂದು ಮೂಲೆಯಲ್ಲಿ ವಾಸಿಸುವದೇ ಲೇಸು” (ಜ್ಞಾನೋ. 21:9) ಎಂದು ಸತ್ಯವೇದ ಹೇಳುತ್ತದೆ. ಕೆಲವರಿಗಂತೂ ದಿನಕ್ಕೆ ಒಮ್ಮೆಯಾದರೂ ಜಗಳವಾಡದಿದ್ದರೆ ಅವರಿಗೆ ದಿನ ಮುಗಿಯುವದೇ ಇಲ್ಲ. ಅಪೊ.ಪೇತ್ರನು ತನ್ನ ಪತ್ರಿಕೆಯಲ್ಲಿ ಈ ಕುರಿತು ಸ್ತ್ರೀಯರಿಗೆ ಹೀಗೆ ಬರೆಯುತ್ತಾನೆ– “ಜಡೆ ಹೆಣದುಕೊಳ್ಳುವದು, ಚಿನ್ನದ ಒಡವೆಗಳನ್ನು ಇಟ್ಟುಕೊಳ್ಳುವದು, ವಸ್ತ್ರಗಳನ್ನು ಧರಿಸಿಕೊಳ್ಳುವದು ಈ ಮೊದಲಾದ ಹೊರಗಿನ ಶೃಂಗಾರವೇ ನಿಮ್ಮ ಅಲಂಕಾರವಾಗಿರಬಾರದು. ಸಾತ್ವಿಕವಾದ ಶಾಂತಮನಸ್ಸು ಎಂಬ ಒಳಗಿನ ಭೂಷಣವೇ ನಿಮ್ಮ ಅಲಂಕಾರವಾಗಿರಲಿ. ಇದು ಶಾಶ್ವತವಾದದ್ದೂ ದೇವರ ದೃಷ್ಟಿಗೆ ಬಹು ಬೆಲೆಯುಳ್ಳದ್ದೂ ಆಗಿದೆ ಎಂದು ಅದೇ ರೀತಿ ಪುರುಷರು ತಮ್ಮ ಹೆಂಡತಿಯರ ಸಂಗಡ ವಿವೇಕದಿಂದ ಒಗೆತನ ಮಾಡಿ ಅವರಿಗೆ ಮಾನ ಸಲ್ಲಿಸಿರಿ” ಎಂದು ಹೇಳುತ್ತಾನೆ (1 ಪೇತ್ರ.3:3–7).

ದೇವಮಕ್ಕಳೇ, ಕರ್ತನ ವಾಗ್ದಾನಗಳಿಗೆ ವಿಧೇಯರಾಗಿ ನಡೆಯುವಾಗ, ಆತನು ನಿಮ್ಮ ಕುಟುಂಬದಲ್ಲಿ ನೆಲೆಸುವಾಗ, ಅಲ್ಲಿ ಸಮಾಧಾನ, ಶಾಂತಿ ನೆಲೆಗೊಳ್ಳುವದು.

*ನೆನಪಿಗೆ : ಕೆಟ್ಟದ್ದನ್ನು ಬಿಟ್ಟು ಒಳ್ಳೆಯದನ್ನೇ ಮಾಡು, ಸಮಾಧಾನವನ್ನು ಹಾರೈಸಿ ಅದಕ್ಕಾಗಿ ಪ್ರಯತ್ನಪಡು (ಕೀರ್ತ. 34:14).*



ಆಗಸ್ಟ್ 6

## ಯೇಸುಕ್ರಿಸ್ತನು!

ಬೆಳಿಗ್ಗೆ : ಕೀರ್ತನೆ 70,71
ಸಂಜೆ : ರೋಮಾ. 8:18–39

ಆಕೆಯು ಒಬ್ಬ ಮಗನನ್ನು ಹೆರುವಳು; ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕೆಂದರೆ, ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು ಅಂದನು (ಮತ್ತಾ.1:21).

ಜನಿಸುವ ಮೊದಲೇ ಹೆಸರಿಡಲ್ಪಟ್ಟವರಲ್ಲಿ ಯೇಸುಕ್ರಿಸ್ತನೂ ಒಬ್ಬನು. ಪ್ರವಾದಿಯಾದ ಯೆಶಾಯನ ಮೂಲಕ “ಇಮ್ಮಾನುವೇಲ” ನೆಂದು ಹೆಸರು ಹೊಂದಿದನು (ಮತ್ತಾ. 1:23). ಆತನು ಅದ್ಭುತ ಸ್ವರೂಪನು, ಆಲೋಚನಾಕರ್ತನು, ಪರಾಕ್ರಮಿಯಾದ ದೇವನು, ನಿತ್ಯನಾದ ತಂದೆ, ಸಮಾಧಾನದ ಪ್ರಭು (ಯೆಶಾ. 9:6) ಕ್ರಿಸ್ತನೆಂಬ ಹೆಸರೂ ಆತನಿಗುಂಟು. ಅದಕ್ಕೆ ಅಭಿಷೇಕಿಸಲ್ಪಟ್ಟವನು ಎಂದು ಅರ್ಥ. ಅದೇ ವೇಳೆಯಲ್ಲಿ ಆತನು ಜನಿಸುವದಕ್ಕೆ ಮೊದಲು ಯೇಸು ಎಂಬ ಹೆಸರನ್ನು ದೇವದೂತನು ತಿಳಿಸಿದನು. ಯೇಸು ಎಂದರೆ ತನ್ನ ಜನರನ್ನು ಪಾಪಗಳಿಂದ ಬಿಡಿಸಿ ಕಾಯುವನು ಎಂದು ಅರ್ಥ.

ಅನೇಕರನ್ನು ರಕ್ಷಣೆಯೊಳಗೆ ಸೇರಿಸಲು ಆತನು ತನ್ನನ್ನೇ ಕಲ್ವಾರಿ ಶಿಲುಬೆಯಲ್ಲಿ ಅರ್ಪಿಸಬೇಕೆಂಬುದು ದೇವರ ಅನಾದಿ ಸಂಕಲ್ಪವಾಗಿತ್ತು. ಆತನು ಭೂಮಿಯಲ್ಲಿ ಹುಟ್ಟುವದಕ್ಕೆ ಮೊದಲೇ ತಂದೆಯನ್ನು ನೋಡಿ, ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ. ನನಗೆ ಒಂದು ದೇಹವನ್ನು ಸಿದ್ಧಮಾಡಿಕೊಟ್ಟೆ ಅಂದನು (ಇಬ್ರಿ. 10:7,5). ಅದರಂತೆಯೇ ಯೇಸುಕ್ರಿಸ್ತನು ಈ ಭೂಮಿಯಲ್ಲಿ ಮೂವತ್ತ ಮೂರುವರೆ ವರುಷಗಳು ಜನರನ್ನು ರಕ್ಷಿಸುವದಕ್ಕಾಗಿ ತನ್ನನ್ನು ಅರ್ಪಣೆ ಮಾಡಿಕೊಂಡನು. ಶಿಲುಬೆಯಲ್ಲಿ ಜನರಿಗಾಗಿ ಪಾಪನಿವಾರಣ ಯಜ್ಞವಾಗಿ ತನ್ನನ್ನೇ ಒಪ್ಪಿಸಿಕೊಂಡನು. ದೇವರಿಗೆ ನಿಮ್ಮನ್ನು ಕುರಿತೂ ಒಂದು ಉದ್ದೇಶವುಂಟು. ಕ್ರಿಸ್ತನು ಶಿಲುಬೆಯಲ್ಲಿ ಸಂಪಾದಿಸಿದ ರಕ್ಷಣೆಯನ್ನು ನೀವು ಇತರರಿಗೂ ಪರಿಚಯಿಸಬೇಕು. ಅವರೂ ಪಾಪ ಕ್ಷಮಾಪಣೆಯನ್ನೂ, ರಕ್ಷಣಾನಂದವನ್ನೂ ಹೊಂದಬೇಕು ಎಂಬುದೇ. ಅಪೊ. ಪೌಲನು ಹೇಳುತ್ತಾನೆ– “ಬಲವಿಲ್ಲದವರನ್ನು ಸಂಪಾದಿಸುವದಕ್ಕಾಗಿ ಬಲವಿಲ್ಲದವನಾದೆನು. ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂದು ಯಾರಿಗೆ ಎಂಥವನಾಗಬೇಕೋ ಅಂಥವನಾದೆನು. ಯೆಹೂದ್ಯರನ್ನು ಸಂಪಾದಿಸಿಕೊಳ್ಳುವದಕ್ಕೆ ಯೆಹೂದ್ಯನಂತಾದೆನು. ನಾನು ಧರ್ಮಶಾಸ್ತ್ರದ ನಿಯಮಗಳಿಗೆ ಅಧೀನನಲ್ಲವಾದರೂ ಅವರಿಗೋಸ್ಕರ ಅವುಗಳಿಗೆ ಅಧೀನನಾದೆನು” ಅಂದನು (1 ಕೊರಿಂ. 9:22,20).

ದೇವಮಕ್ಕಳೇ, ಸಮಯ ಅನುಕೂಲವಾಗಿದ್ದರೂ ಅನುಕೂಲವಿಲ್ಲದಿದ್ದರೂ ದೇವರ ವಾಕ್ಯವನ್ನು ಸಾರಿ, ಆತ್ಮಗಳ ಆದಾಯಪಡಿಸಿರಿ.

*ನೆನಪಿಗೆ : ಯೆಹೋವನ ಹಸ್ತವು ರಕ್ಷಿಸಲಾರದಂತೆ ಮೋಟುಗೈಯಲ್ಲ; ಆತನ ಕಿವಿಯು ಕೇಳಲಾರದ ಹಾಗೆ ಕಿವುಡಲ್ಲ (ಯೆಶಾ. 59:1).*

ಆಗಸ್ಟ್ 7

## ಇಲ್ಲದ್ದನ್ನು!

ಬೆಳಿಗ್ಗೆ : ಕೀರ್ತನೆ 72,73
ಸಂಜೆ : ರೋಮಾ. 9:1–13

ದೇವರು ಸತ್ತವರನ್ನು ಬದುಕಿಸುವವನಾಗಿಯೂ, ಇಲ್ಲದ್ದನ್ನು ಇರುವದಾಗಿ ಕರೆಯುವವನಾಗಿಯೂ ಇದ್ದಾನೆಂದು ಅಬ್ರಹಾಮನು ನಂಬಿದನು (ರೋಮಾ. 4:17).

ನಮ್ಮ ಮೂಲಪಿತೃವಾದ ಅಬ್ರಹಾಮನನ್ನು ಕುರಿತು ಮೇಲೆ ತಿಳಿಸಿದ ರೀತಿಯಲ್ಲಿ ಬರೆಯಲ್ಪಟ್ಟಿದೆ. ಅಬ್ರಹಾಮನು ತಾನು ನಂಬಿದ್ದ ದೇವರು ಇಲ್ಲದವುಗಳನ್ನು ಇರುವದಾಗಿ ಕರೆಯುವ ದೇವರಾಗಿರುವನು ಎಂಬ ದೃಢವಾದ ವಿಶ್ವಾಸದಿಂದ ಕೂಡಿದವನಾಗಿದ್ದನು. ಇದು ಪರಮಾಶ್ಚರ್ಯವಾದದ್ದು. ಯಾಕೆಂದರೆ ಸಾಧಾರಣ ಜನರು ಅದನ್ನು ನಂಬುವದಿಲ್ಲ. ಆದರೆ ನಂಬುವವನು ಅದನ್ನು ತಿಳಿದಿರುವನು.

ಅಬ್ರಹಾಮನಿಗೆ ಸಂತತಿಯನ್ನು ವಾಗ್ದಾನ ಮಾಡಿದಾಗ ಅವನ ವಯಸ್ಸು 75. ಅವನ ಹೆಂಡತಿ ಸಾರಳ ವಯಸ್ಸು 65. ಅವರಿಬ್ಬರ ಶರೀರಗಳೂ ಸಂತಾನವನ್ನು ಪಡೆಯುವ ಶಕ್ತಿಯನ್ನು ಕಳೆದುಕೊಂಡಿದ್ದವು. ಆದರೆ ಅಬ್ರಹಾಮನ ವಿಶ್ವಾಸ ಏನಾಗಿತ್ತು? ದೇವರು ಇಲ್ಲದ್ದನ್ನು ಇರುವದಾಗಿ ಕರೆಯುವ ದೇವರು. ಪ್ರಾಯ ಮೀರಿದ ಶರೀರಕ್ಕೆ ಸಂತಾನವನ್ನು ಪಡೆಯುವ ಶಕ್ತಿಯನ್ನು ನೀಡುವ ದೇವರು. ಆದ್ದರಿಂದಲೇ ಕರ್ತನು ಸಮುದ್ರದ ದಂಡೆಯಲ್ಲಿರುವ ಮರಳಿನಷ್ಟು ಆಕಾಶದಲ್ಲಿರುವ ನಕ್ಷತ್ರಗಳಷ್ಟು ಸಂತತಿಯನ್ನು ನೀಡುವದಾಗಿ ಅಬ್ರಹಾಮನಿಗೆ ವಾಗ್ದಾನ ಮಾಡಿದಾಗ ಅವನು ಯಾವದೇ ತರ್ಕಕ್ಕೆ ಒಳಪಡದೆ ಕರ್ತನ ಮಾತಿನ ಮೇಲೆ ನಂಬಿಕೆ ಇಟ್ಟನು. ಅವನ ನಂಬಿಕೆಯಂತೆಯೇ ಆಯಿತು. ಇಂದಿಗೂ ಇಸ್ರಾಯೇಲ್ಯರು ಸಾಕ್ಷಿಗಳಾಗಿರುವರು. ದೇವರಿಂದ ಆಗದಂಥ ಕಾರ್ಯ ಒಂದೂ ಇಲ್ಲ. ಆದಾಮ ಹವ್ವಳನ್ನು ತಂದೆ ತಾಯಿ ಇಲ್ಲದೆ ಸೃಷ್ಟಿಸಿದ ದೇವರು ಎಷ್ಟು ಅದ್ಭುತವಾದನು. ಯೇಸುಕ್ರಿಸ್ತನ ತಾಯಿಯಾದ ಮರಿಯಳನ್ನು ನೋಡಿರಿ. ಅವಳು ಯೋಸೇಫನಿಗೆ ನಿಶ್ಚಯವಾಗಿದ್ದು ಮದುವೆಯಾಗಿ ದಾಂಪತ್ಯಜೀವನಕ್ಕೆ ಕಾಲಿಡುವ ಮೊದಲೇ ಪವಿತ್ರಾತ್ಮನ ಶಕ್ತಿಯಿಂದ ಗರ್ಭಧರಿಸಿ ಯೇಸುಕ್ರಿಸ್ತನನ್ನು ಭೂಮಿಗೆ ತರಲು ತನ್ನನ್ನು ಒಪ್ಪಿಸಿಕೊಟ್ಟಳು.

ದೇವಮಕ್ಕಳೇ, ಇಂದು ನೀವು ಕರ್ತನಾದ ಯೇಸುಕ್ರಿಸ್ತನ ಮೇಲೆ ನಂಬಿಕೆ ಇಡುವಿರಾದರೆ ನೀವು ಭಾಗ್ಯವಂತರಾಗುವಿರಿ. ಅದು ಇಲ್ಲ ಇದು ಇಲ್ಲ ಎಂದು ಗುಣುಗುಟ್ಟದಿರಿ. ನನಗೆ ಒಂದು ಆಶೀರ್ವಾದ ಇಲ್ಲವೇ ಎಂದು ಸೋತುಹೋಗಬೇಡಿರಿ. ಕರ್ತನು ನೀಡಿರುವ ವಾಗ್ದಾನಗಳ ಮೇಲೆ ನಂಬಿಕೆ ಇಟ್ಟು ಪ್ರಾರ್ಥಿಸಿರಿ. ಅಬ್ರಹಾಮನ ನಂಬಿಕೆಯನ್ನು ಘನಪಡಿಸಿದಂತೆ ಕರ್ತನು ನಿಮ್ಮ ನಂಬಿಕೆಯನ್ನೂ ಘನಪಡಿಸುವನು.

*ನೆನಪಿಗೆ : ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ (ರೋಮಾ. 4:20).*



ಆಗಸ್ಟ್ 8

## ಕುರಿ ಎಲ್ಲಿ!

ಬೆಳಿಗ್ಗೆ : ಕೀರ್ತನೆ 74,75,76
ಸಂಜೆ : ರೋಮಾ. 9:14–33

ಇಸಾಕನು ತನ್ನ ತಂದೆಯಾದ ಅಬ್ರಹಾಮನಿಗೆ ಅಪ್ಪಾ ಎಂದು ಕರೆಯಲು ಅಬ್ರಹಾಮನು ಏನು ಮಗನೇ ಅಂದನು. ಇಸಾಕನು ಇಗೋ ಬೆಂಕಿಯೂ ಕಟ್ಟಿಗೆಯೂ ಇದೆ; ಆದರೆ ಹೋಮಕ್ಕೆ ಬೇಕಾದ ಕುರಿ ಎಲ್ಲಿ? ಅಂದನು (ಆದಿ. 22:7).

ಅಬ್ರಹಾಮನು ತನ್ನ ಏಕ ಮಾತ್ರ ಪುತ್ರನನ್ನು ಯಜ್ಞಾರ್ಪಣೆ ಮಾಡಲು ಮೊರಿಯಾ ಬೆಟ್ಟಕ್ಕೆ ಕರೆದುಕೊಂಡು ಹೋದಾಗ, ಅದನ್ನು ಇಸಾಕನೋ ಇಲ್ಲವೇ, ಅವನೊಂದಿಗೆ ಹೋದ ಸೇವಕರೋ ತಿಳಿದಿರಲಿಲ್ಲ. ಆದರೂ ಇಸಾಕನ ಅಂತರ್ಯದಲ್ಲಿ ಯಜ್ಞ ಅರ್ಪಿಸುವದಕ್ಕಾಗಿ ಮೊರಿಯಾ ಬೆಟ್ಟಕ್ಕೆ ಹೋಗುತ್ತಿದ್ದೇವೆ. ಆದರೆ ತಂದೆಯಾದ ಅಬ್ರಹಾಮನು, ಯಜ್ಞಕ್ಕಾಗಿ ಯಾವ ಪ್ರಾಣಿಯನ್ನೂ ತೆಗೆದುಕೊಂಡಿಲ್ಲವಲ್ಲಾ ಎಂಬ ಪ್ರಶ್ನೆ ಉದ್ಭವಿಸಿತು.

ಶ್ರೀಮಂತನಾಗಿದ್ದ ಅಬ್ರಹಾಮನಿಗೆ ಒಂದು ಕುರಿ ಏನು? ನೂರು ಕುರಿಗಳನ್ನು ತೆಗೆದುಕೊಂಡು ಹೋಗಲು ಸಾಧ್ಯ. ಆ ಬೆಟ್ಟದಲ್ಲಿ ಖರೀದಿಸಲು ಅಂಗಡಿಗಳೂ ಇಲ್ಲ. ಮಗನಿಗೆ ಅಬ್ರಹಾಮನು ಕೊಟ್ಟ ಉತ್ತರವೇನು? ಮಗನೇ ಹೋಮಕ್ಕೆ ಬೇಕಾದ ಕುರಿಯನ್ನು ದೇವರೇ ಒದಗಿಸುವನು ಅಂದನು (ಆದಿ. 22:8). ಹೌದು ಆತನು ಇಲ್ಲದ್ದನ್ನು ಇರುವದಾಗಿ ಕರೆಯುವ ದೇವರು. ಸತ್ಯವೇದ ಹೇಳುತ್ತದೆ– "ಪ್ರಾಯದ ಸಿಂಹಗಳಾದರೋ ಹೊಟ್ಟೆಗಿಲ್ಲದೆ ಹಸಿದಾವು. ಯೆಹೋವನ ಸನ್ನಿಧಿಯಲ್ಲಿ ಬೇಡಿಕೊಳ್ಳುವವರಿಗೆ ಯಾವ ಮೇಲಿಗೂ ಕಡಿಮೆಯಿಲ್ಲ" (ಕೀರ್ತ. 34:10) ಎಂದು ಏನೂ ಇಲ್ಲದಿದ್ದರೂ ಆತನು ಸೃಷ್ಟಿಸಲು ಶಕ್ತನಾದಾತನು. ಮೊರಿಯಾ ಬೆಟ್ಟಕ್ಕೆ ಬಂದಕೂಡಲೆ ಅಬ್ರಹಾಮನು ಇಸಾಕನ ಕೈಕಾಲುಗಳನ್ನು ಕಟ್ಟಿ ಯಜ್ಞವೇದಿಯ ಮೇಲೆ ಮಲಗಿಸಿದಾಗ, ಮಗನು ನಡುಗಿಹೋಗಿರಬಹುದು. ಅಯ್ಯೋ, ಆ ಕುರಿಮರಿ ನಾನಾ? ಎಂದು ಭಯಭೀತನಾಗಿರಬಹುದು. ಆಗ ಇಸಾಕನು ನಿನ್ನ ಮಗನ ಮೇಲೆ ಕೈಹಾಕಬೇಡ" ಅವನಿಗೆ ಏನೂ ಮಾಡಬೇಡ ಎಂಬ ಕರ್ತನ ಧ್ವನಿಯನ್ನು ಪ್ರಪ್ರಥಮವಾಗಿ ಕೇಳಿಸಿಕೊಂಡನು. ಮಾತ್ರವಲ್ಲ ಹಿಂದುಗಡೆ ಒಂದು ಟಗರು ಪೊದೆಗಳಲ್ಲಿ ಸಿಕ್ಕಿಕೊಂಡದ್ದನ್ನು ಕಂಡನು. ಕುರಿಮರಿಯಾದ ಯೇಸುಕ್ರಿಸ್ತನನ್ನು ಕಂಡನು.

ದೇವಮಕ್ಕಳೇ, ನಾವು ನಂಬಿರುವ ನಮ್ಮ ಕರ್ತನು ಯೆಹೋವಾಯೀರೆ ಆಗಿದ್ದಾನೆ. ಅಂದರೆ ಎಲ್ಲವನ್ನೂ ಒದಗಿಸುವಾತನಾಗಿದ್ದಾನೆ. ಯಾವದಕ್ಕೂ ಚಿಂತೆ ಮಾಡಬೇಡಿರಿ. ಆತನಲ್ಲಿಯೇ ನಿಮ್ಮ ನಂಬಿಕೆ ದೃಢವಾಗಿರಲಿ. ಯೆಹೋವನು ನನ್ನ ಕಾರ್ಯವನ್ನು ಸಿದ್ಧಿಗೆ ತರುವನು. ಆತನ ಕೃಪೆಯು ಶಾಶ್ವತವಾದದ್ದು (ಕೀರ್ತ. 138:8).

*ನೆನಪಿಗೆ : ನನ್ನ ದೇವರು ಕ್ರಿಸ್ತಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು (ಫಿಲಿ. 4:19).*

ಆಗಸ್ಟ್ 9

## ಕತ್ತಲೆಯಿಂದ!

ಬೆಳಿಗ್ಗೆ : ಕೀರ್ತನೆ 77,78
ಸಂಜೆ : ರೋಮಾ. 10

ಕತ್ತಲೆಯೊಳಗಿಂದ ಬೆಳಕು ಹೊಳೆಯಲಿ ಎಂದು ಹೇಳಿದ ದೇವರು ತಾನೇ ಯೇಸುಕ್ರಿಸ್ತನ ಮುಖದಲ್ಲಿ ತೋರುವ ದೇವಪ್ರಭಾವ ಜ್ಞಾನವೆಂಬ ಪ್ರಕಾಶವು ಅನೇಕರಿಗೆ ಉಂಟಾಗುವದಕ್ಕಾಗಿ ನಮ್ಮ ಹೃದಯಗಳಲ್ಲಿ ಹೊಳೆದನು (2 ಕೊರಿಂ. 4:6).

ನಮ್ಮ ದೇವರು ಇಲ್ಲದ್ದನ್ನು ಇರುವದಾಗಿ ಕರೆಯುವ ದೇವರು. ಈ ಭೂಮಿಯು ಕ್ರಮವಿಲ್ಲದೆಯೂ, ಬರಿದಾಗಿಯೂ, ಕತ್ತಲೆಯಾಗಿಯೂ ಇದ್ದಾಗ, ದೇವರಾತ್ಮನು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು. ದೇವರು ಉಂಟಾಗಲಿ ಎಂದು ಹೇಳಿದಾಗ ಒಂದೊಂದಾಗಿ ಸೃಷ್ಟಿಸಲ್ಪಟ್ಟಿತು. ಪ್ರಪ್ರಥಮವಾಗಿ ದೇವರು ಆಡಿದ ಮಾತು ಬೆಳಕಾಗಲಿ ಎಂಬುದು (ಆದಿ. 1:3). ಆಗ ಬೆಳಕು ಹೇಗೆ ಉಂಟಾಯಿತು? ಇರುಳಿನಿಂದ ಬೆಳಕು ಉಂಟಾಯಿತು.

ಮನುಷ್ಯನು ವಿಜ್ಞಾನದ ಸಹಾಯದಿಂದ ಚಿಕ್ಕ ಬೆಳಕನ್ನು ದೊಡ್ಡ ಬೆಳಕನ್ನಾಗಿಸುವನು. ಆದರೆ ಕತ್ತಲೆಯಿಂದ ಬೆಳಕನ್ನು ಸೃಷ್ಟಿಸಲು ಯಾವ ಮನುಷ್ಯನಿಂದಲೂ ಸಾಧ್ಯವಿಲ್ಲ. ಕತ್ತಲೆಗೆ ಶಕ್ತಿ ಇಲ್ಲ. ಆದರೆ ಬೆಳಕಾದರೋ ಶಕ್ತಿಯುತವಾದದ್ದು. ಕತ್ತಲೆಗೆ ಚಲನಾ ಶಕ್ತಿಯಿಲ್ಲ. ಬೆಳಕೋ ಒಂದು ಸೆಕೆಂಡಿಗೆ **1,83,000** ಮೈಲುಗಳ ವೇಗದಲ್ಲಿ ಚಲಿಸುವದು. ದೇವರು ಎಷ್ಟು ಅದ್ಭುತನಲ್ಲವೇ! ನಿಮ್ಮ ಜೀವಿತದಲ್ಲೂ ಮೊದಲ ದಿನದಲ್ಲಿ ಮೊದಲ ಅದ್ಭುತ ಬೆಳಕಾಗಿರಲಿ. ಅದಕ್ಕಾಗಿಯೇ ಕರ್ತನು ತನ್ನ ವಾಕ್ಯವನ್ನು ನಿಮ್ಮೊಳಗೆ ಇರಿಸುವನು. ದೇವರು ಬೆಳಕಾಗಿದ್ದಾನೆ, ಆತನ ವಾಕ್ಯಗಳೂ ಬೆಳಕಾಗಿರುವದು. ಆ ವಾಕ್ಯಗಳು ಕತ್ತಲೆಯಾದ ಜೀವಿತದಲ್ಲಿ ಬೆಳಕನ್ನು ಮೂಡಿಸಿ ನಮ್ಮನ್ನು ಬೆಳಕಿನ ಮಕ್ಕಳನ್ನಾಗಿಸುವದು. ಅಂದರೆ ದೇವರ ಮಕ್ಕಳಾಗಿ ಮಾರ್ಪಡಿಸುವದು ಹಾಗೆಯೇ ದೇವರ ಪ್ರಸನ್ನತೆಯು ಒಬ್ಬ ಮನುಷ್ಯನ ಆಂತರ್ಯದಲ್ಲಿನ ಆತ್ಮೀಕ ಇರುಳನ್ನು ಓಡಿಸಿ ಪ್ರಕಾಶವನ್ನು ನೀಡುವದು. ಅಂಧಕಾರ ಶಕ್ತಿಗಳನ್ನು ಓಡಿಸಿ ಆಶ್ಚರ್ಯಕರವಾದ ದೈವೀಕ ಬೆಳಕನ್ನು ತರುವದು. ದೇವರು ಯೇಸುಕ್ರಿಸ್ತನಾಗಿ ಈ ಲೋಕದಲ್ಲಿ ಅವತರಿಸಿದನು. ಕತ್ತಲಲ್ಲಿಯೂ ಮರಣಾಂಧಕಾರದಲ್ಲಿಯೂ ವಾಸಿಸಿರುವವರಾದ ನಮಗೆ ಪ್ರಕಾಶಕೊಟ್ಟನು (ಲೂಕ. 1:79).

ದೇವಮಕ್ಕಳೇ, ಆ ಬೆಳಕು ನಿಮ್ಮ ಆಂತರ್ಯಗಳಲ್ಲಿ ಉದಯಿಸಲಿ. ಕರ್ತನಿಗೆ ನಿಮ್ಮ ಜೀವಿತದ ಕುರಿತು ಒಂದು ಉದ್ದೇಶವುಂಟು. ನೀವು ಈ ಪ್ರಪಂಚದಲ್ಲಿ ಆತನ ಜ್ಯೋತಿಗಳಾಗಿ ಬೆಳಗಬೇಕೆಂಬುದೇ ಆತನ ಉದ್ದೇಶವಾಗಿದೆ. ಆತನು ನೀತಿಸೂರ್ಯನಾಗಿ ಬೆಳಕನ್ನು ಕೊಡುವಂತೆ ನೀವೂ ಸಹಾ ಕತ್ತಲೆಯಿಂದ ತುಂಬಿದ ಆತ್ಮಗಳಿಗೆ ಬೆಳಕನ್ನು ಕೊಡಬೇಕು. ಇದು ನಿಮ್ಮ ಗುರಿಯಾಗಿರಲಿ. ಎದ್ದು ಪ್ರಕಾಶಿಸಿರಿ.

*ನೆನಪಿಗೆ : ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು (ಯೋಹಾ. 8:12).*



ಆಗಸ್ಟ್ 10

## ಗಾಳಿ ಇಲ್ಲ ಮಳೆಯೂ ಇಲ್ಲ!

ಬೆಳಿಗ್ಗೆ : ಕೀರ್ತನೆ 79,80
ಸಂಜೆ : ರೋಮಾ. 11:1–24

ಈ ಹಳ್ಳದಲ್ಲಿ ತುಂಬಾ ಗುಂಡಿಗಳನ್ನು ಮಾಡಿರಿ. ಗಾಳಿ ಮಳೆಗಳು ಕಾಣದಿದ್ದರೂ ಇದು ನೀರಿನಿಂದ ತುಂಬುವದು. ನೀವೂ ನಿಮ್ಮ ಕುರಿ ದನಗಳೂ ಎಲ್ಲಾ ಪಶುಗಳೂ ಕುಡಿಯಬಹುದು ಎಂಬದಾಗಿ ಯೆಹೋವನು ಅನ್ನುತ್ತಾನೆ (2 ಅರ. 3:17).

ನಮ್ಮ ದೇವರು ಸರ್ವಶಕ್ತನಾದ ದೇವರು. ಆತನು ಮಾಡಬೇಕೆಂದು ನೆನಸುವ ಕಾರ್ಯಕ್ಕೆ ತಡೆ ಉಂಟಾಗುವದಿಲ್ಲ. ಆತನು ಹೇಳಿದರೆ ಆಗುವದು. ಆತನು ಇಲ್ಲದ್ದನ್ನು ಇರುವದಾಗಿ ಕರೆಯುವ ದೇವರು. ಕತ್ತಲೆಯಿಂದ ಬೆಳಕನ್ನು ಪ್ರಕಾಶಗೊಳಿಸುವ ದೇವರು. ಇಲ್ಲಿ ಗಾಳಿ ಮಳೆಗಳಿಲ್ಲದೆ ಹಳ್ಳವು ನೀರಿನಿಂದ ತುಂಬುವದು ಎಂದು ಹೇಳಿದನು. ಹಾಗೆಯೇ ತುಂಬಿತು.

ಒಮ್ಮೆ ಮೋವಾಬ್ಯರ ಅರಸನ ವಿರೋಧವಾಗಿ ಇಸ್ರಾಯೇಲ್ಯರ ಅರಸನಾದ ಯೋರಾಮನೂ, ಯೆಹೂದದ ಅರಸನಾದ ಯೆಹೋಷಾಫಾಟನೂ ಯುದ್ಧಕ್ಕೆ ಹೊರಟರು. ಅರಣ್ಯದಲ್ಲಿ ಏಳು ದಿನಗಳು ಪ್ರಯಾಣ ಮಾಡಿದಾಗ ಅವರಿಗೂ ಅವರ ಪಶುಗಳಿಗೂ ನೀರು ಸಿಕ್ಕದೆಹೋಯಿತು. ಆಗ ಅವರು ಕರ್ತನ ಬಳಿ ವಿಚಾರಿಸಲು ಪ್ರವಾದಿಯಾದ ಎಲೀಷನನ್ನು ಹುಡುಕಿ ಹೋದರು. ಆಗ ಕರ್ತನು ಆಶ್ಚರ್ಯಕರವಾದ ಒಂದು ಕಾರ್ಯವನ್ನು ಹೇಳಿದನು. ಈ ಹಳ್ಳದಲ್ಲಿ ತುಂಬಾ ಗುಂಡಿಗಳನ್ನು ಮಾಡಿರಿ. ಗಾಳಿ ಮಳೆಗಳು ಕಾಣದಿದ್ದರೂ ಅದು ನೀರಿನಿಂದ ತುಂಬುವದು. ನೀವೂ ನಿಮ್ಮ ದನಕರುಗಳೂ ಕುಡಿಯಬಹುದು ಎಂದು. ಹಾಗೆಯೇ ಏದೋಮ್ ಪಟ್ಟಣದ ಕಡೆಯಿಂದ ನೀರು ಹರಿದುಬಂದು ದೇಶದಲ್ಲೆಲ್ಲಾ ತುಂಬಿಕೊಂಡಿತು. ಅನೇಕರ ನಂಬಿಕೆ ಏನು? ಸ್ವಲ್ಪವನ್ನೂ ಆತನು ಆಶೀರ್ವದಿಸಿ ಹೆಚ್ಚಿಸುವನು. ಚಾರೆಪ್ತ ಊರಿನ ವಿಧವೆಯ ಮನೆಯಲ್ಲಿನ ಮಡಿಕೆಯಲ್ಲಿ ಒಂದು ಹಿಡಿಹಿಟ್ಟು ಮೊಗೆಯಲ್ಲಿ ಸ್ವಲ್ಪ ಎಣ್ಣೆ ಇತ್ತು. ಅದರಿಂದ ಕರ್ತನು ಬರಗಾಲ ಪೂರ್ತಿ ಅವರನ್ನು ಪೋಷಿಸಿದನು. ಒಬ್ಬ ವಿಧವೆಯ ಮನೆಯಲ್ಲಿ ಪಾತ್ರೆಯಲ್ಲಿ ಎಣ್ಣೆ ಇತ್ತು. ಅದನ್ನು ಕರ್ತನು ಆಶೀರ್ವದಿಸಿದಾಗ ಅನೇಕ ಪಾತ್ರೆಗಳು ತುಂಬಲ್ಪಟ್ಟವು. ಇದರಿಂದ ಆಕೆಯ ಸಾಲದ ಸಮಸ್ಯೆ ನೀಗಿತು. ಐದು ರೊಟ್ಟಿ ಎರಡು ಮೀನುಗಳಿಂದ ನಮ್ಮ ಕರ್ತನು ಐದು ಸಾವಿರ ಜನರಿಗೆ ಉಣಬಡಿಸಿದನು.

ದೇವಮಕ್ಕಳೇ, ನಿಮ್ಮ ಜೀವಿತದಲ್ಲಿ ಯಾವುದೇ ಕೊರತೆ ಇದ್ದರೂ, ಅತಿಶಯಗಳನ್ನು ಅದ್ಭುತಗಳನ್ನು ಮಾಡುವ ದೇವರ ಹೆಸರಿನಲ್ಲಿ ನಂಬಿಕೆಯುಳ್ಳವರಾಗಿರ್ರಿ. “ಯಾವದೇ ಮಾರ್ಗ ತೆರೆಯಲ್ಪಡದು” ಎಂದು ಪ್ರಾಪಂಚಿಕರು ಹೇಳುವ ಸಮಯದಲ್ಲಿ ದೇವರು ಅದ್ಭುತವಾದ ರೀತಿಯಲ್ಲಿ ಒಂದು ನೂತನ ಮಾರ್ಗವನ್ನು ತೆರೆಯುವದಕ್ಕೆ ಶಕ್ತನಾಗಿರುವನು. ಆತನ ಮಾರ್ಗಗಳು ಸುಳಿಗಾಳಿಯಲ್ಲಿಯೂ, ಬಿರುಗಾಳಿಯಲ್ಲಿಯೂ ಇರುವದು.

*ನೆನಪಿಗೆ : ಆತನು ಮೇಘಗಳಿಗೆ ಅಪ್ಪಣೆಕೊಟ್ಟು ಆಕಾಶದ್ವಾರಗಳನ್ನು ತೆರೆದು ಸ್ವರ್ಗಧಾನ್ಯವಾದ ಮನ್ನವನ್ನು ಅವರಿಗೋಸ್ಕರ ಸುರಿಸಿ ಅವರಿಗೆ ಉಣ್ಣಲಿಕ್ಕೆ ಕೊಟ್ಟನು (ಕೀರ್ತ. 78:23,24).*

ಆಗಸ್ಟ್ 11

## ಅಸಾಧ್ಯವಾದದ್ದನ್ನು!

ಬೆಳಿಗ್ಗೆ : ಕೀರ್ತನೆ 81,82,83
ಸಂಜೆ : ರೋಮಾ.11:25–36

ಕಾಗೆಗಳು ಅವನಿಗೆ ಪ್ರಾತಃಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ರೊಟ್ಟಿ ಮಾಂಸ ಇವುಗಳನ್ನು ತಂದುಕೊಡುತ್ತಿದ್ದವು. ಅವನು ಇವುಗಳನ್ನು ತಿನ್ನುತ್ತಿದ್ದನು; ಹಳ್ಳದ ನೀರು ಅವನಿಗೆ ಪಾನವಾಗಿತ್ತು (1 ಅರಸು 17:6).

ನಮ್ಮ ದೇವರು ಇಲ್ಲದ್ದನ್ನು ಇರುವದಾಗಿ ಕರೆಯುವ ದೇವರು. ಕತ್ತಲೆಯಿಂದ ಬೆಳಕನ್ನು ಉಂಟುಮಾಡಿದ ದೇವರು. ಮಾತ್ರವಲ್ಲ ಆತನು ಅಸಾಧ್ಯವಾದದ್ದನ್ನು ಸಾಧ್ಯಗೊಳಿಸುವ ದೇವರು. ಕರ್ತನಿಗಾಗಿ ವೈರಾಗ್ಯವುಳ್ಳವನಾಗಿದ್ದ ಪ್ರವಾದಿಯಾದ ಎಲೀಯನನ್ನು ಪೋಷಿಸಲು ನೆನಸಿದಾಗ, ಕಾಗೆಯ ಮೂಲಕ ಪೋಷಿಸಿದನು. ಕಾಗೆಯು ಮನುಷ್ಯರ ಮಧ್ಯದಲ್ಲಿ ವಾಸಿಸಿದರೂ, ಅದು ಎಂದಿಗೂ ಮನುಷ್ಯನನ್ನು ನಂಬುವದಿಲ್ಲ. ಯಾವಾಗ್ಯೂ ಮನುಷ್ಯನನ್ನು ಸಂದೇಹದ ಕಣ್ಣುಗಳಿಂದಲೇ ನೋಡುವದು. ಮನುಷ್ಯನು ಆನೆ, ಹುಲಿ, ಸಿಂಹ ಮುಂತಾದ ದೊಡ್ಡದಾದ ಹಾಗೂ ಭಯಂಕರವಾದ ಪ್ರಾಣಿಗಳನ್ನು ಪಳಗಿಸುತ್ತಾನೆ. ಆದರೆ ಕಾಗೆಯನ್ನು ಇದುವರೆಗೆ ಮನುಷ್ಯನು ಪಳಗಿಸಿದ್ದಿಲ್ಲ.

ಕಾಗೆಯ ಸ್ವಭಾವ ಮನುಷ್ಯನ ಕೈಯಿಂದ ಕಸಿದುಕೊಳ್ಳುವದೇ ಹೊರತು ಅವನಿಗೆ ಏನನ್ನೂ ಕೊಡುವದಿಲ್ಲ. ಅಂಥಹ ಕಾಗೆಯ ಮೂಲಕ ಕರ್ತನು ಎಲೀಯನಿಗಾಗಿ ರೊಟ್ಟಿ ಮಾಂಸ ಇವುಗಳನ್ನು ಕಳುಹಿಸಿಕೊಟ್ಟು ಪೋಷಿಸಿದನೆಂದರೆ ಎಂಥಹ ಆಶ್ಚರ್ಯದ ಸಂಗತಿ. ಕರ್ತನು ಅದ್ಭುತವಾಗಿ ಕಾಗೆಯನ್ನು ಪಳಗಿಸಿದನು. ಹೌದು ನಮ್ಮ ದೇವರು ಅಸಾಧ್ಯವಾದ ಕಾರ್ಯಗಳನ್ನು ಸಾಧ್ಯಗೊಳಿಸುವ ದೇವರು. ಕೆಲವರ ವಿಷಯದಲ್ಲಿ ನಾವು ಇವನು ರಕ್ಷಿಸಲ್ಪಡುವದೇ ಇಲ್ಲ ಎಂದು ಹೇಳುತ್ತೇವೆ. ಆದರೆ ಕರ್ತನು ಅವರನ್ನು ಅದ್ಭುತವಾಗಿ ರಕ್ಷಿಸುವನು. ಕೆಲವರನ್ನು ನೋಡಿ ಇವನು ಕರ್ತನ ಸೇವೆಗೆ ಸಹಾಯ ಮಾಡುವದಿಲ್ಲ ಎಂದು ನೆನಸಬಹುದು. ಕರ್ತನಾದರೋ ಅವನನ್ನು ಸಾವಿರಗಟ್ಟಲೆ ಕಾಣಿಕೆ ಕೊಡುವಂತೆ ಮಾಡುವನು. ಕೆಲವರನ್ನು ಕುರಿತು ಇವನು ಕಲ್ಲಿನಂಥ ಕಠೋರ ಮನಸ್ಸಿನವನೆಂದು ಭಾವಿಸಬಹುದು. ಆದರೆ ಕರ್ತನಾದರೋ ಕ್ಷಣಮಾತ್ರದಲ್ಲಿ ಆ ಕಲ್ಲಾದ ಮನಸ್ಸನ್ನು ಒಡೆದು ಮೇಣದಂತೆ ಕರಗುವಂತೆ ಮಾಡುವನು.

ದೇವಮಕ್ಕಳೇ, ನಿಮ್ಮ ಜೀವಿತದಲ್ಲಿ ಕೊರತೆ ಇದೆಯಾ? ಸಾಲದ ಸಮಸ್ಯೆಯಾ? ಉದ್ಯೋಗ ಇಲ್ಲವಾ? ಎಲೀಯನ ದೇವರೇ ಎಲ್ಲಿದ್ದೀ? ಎಂದು ಕರೆಯಿರಿ. ನಿಮ್ಮ ಅಗತ್ಯತೆಗಳು ಪೂರೈಸಲ್ಪಡುವವು. ಕರ್ತನು ನಿಮಗೆ ಅದ್ಭುತವನ್ನು ಮಾಡುವನು. ಎಲೀಯನನ್ನು ಕಾಗೆಯ ಮೂಲಕವೂ, ಚಾರೆಪ್ತಾ ಊರಿನ ವಿಧವೆಯ ಮೂಲಕವೂ ದೇವದೂತರ ಮೂಲಕ ಪೋಷಿಸಿದ ದೇವರು ನಿಮ್ಮನ್ನು ಪೋಷಿಸಲೂ ಶಕ್ತನಾಗಿರುವನು.

*ನೆನಪಿಗೆ : ಇಗೋ, ನಾನು ಯೆಹೋವನು, ನರಪ್ರಾಣಿಗೆಲ್ಲಾ ದೇವರು, ನನಗೆ ಅಸಾಧ್ಯವಾದದ್ದುಂಟೋ? (ಯೆರೆ. 32:27).*



ಆಗಸ್ಟ್ 12

## ಅಸಹಾಯಕತೆಯಲ್ಲಿ!

ಬೆಳಿಗ್ಗೆ : ಕೀರ್ತನೆ 84,85,86
ಸಂಜೆ : ರೋಮಾ. 12

ಆದಾಗ್ಯೂ ಮುಖ್ಯಪಾನದಾಯಕನು ಯೋಸೇಫನನ್ನು ನೆನಪುಮಾಡದೆ ಮರೆತುಬಿಟ್ಟನು (ಆದಿ. 40:23).

ನಮ್ಮ ದೇವರು ಯಾರು? ಅಸಹಾಯಕತೆಯ ಸಮಯದಲ್ಲಿ ಸಹಾಯಹಸ್ತವನ್ನು ನೀಡಲು ಶಕ್ತನಾದಾತನು. ಆತನು ಬರಿದಾಗಿದ್ದದರಿಂದ ಸಕಲವನ್ನೂ ಸೃಷ್ಟಿಸಿದಾತನು. ಇಲ್ಲದ್ದನ್ನು ಇರುವದಾಗಿ ಕರೆಯುವ ದೇವರು ಈ ಸತ್ಯವನ್ನು ಯೋಸೇಫನ ಚರಿತ್ರೆಯ ಮೂಲಕ ತಿಳಿದುಕೊಳ್ಳಬಹುದು. ಯೋಸೇಫನು ಯೌವನ ಪ್ರಾಯದಲ್ಲಿ ಸುಮಾರು ಹದಿಮೂರು ವರುಷಗಳು ಸೆರೆಮನೆ ವಾಸವನ್ನು ಅನುಭವಿಸಿದನು. ಸೆರೆಮನೆಯಲ್ಲಿ ಬಿಡುಗಡೆ ಹೊಂದಲಿಕ್ಕೆ ಒಂದು ಅವಕಾಶವೂ ಇರಲಿಲ್ಲ. ಜೀವಾಂತ್ಯದವರೆಗೆ ಸೆರೆಮನೆಯಲ್ಲೇ ಇದ್ದು ನಾನು ಸಾಯಬೇಕು ಎಂದು ಅವನು ಭಾವಿಸಿದ್ದಿರಬಹುದು.

ನೀರಿನಲ್ಲಿ ಮುಳುಗುತ್ತಿರುವವನಿಗೆ ಒಂದು ಹುಲ್ಲುಕಡ್ಡಿ ಸಿಕ್ಕಿದರೂ, ಅದನ್ನು ಬಲವಾಗಿ ಹಿಡಿದುಕೊಂಡು ಮೇಲೆ ಬರಲು ಪ್ರಯತ್ನಿಸುವನು. ಹಾಗೆಯೇ ಸೆರೆಮನೆಯಲ್ಲಿ ಬಂಧಿಸಲ್ಪಟ್ಟಿದ್ದ ಪಾನಪಾತ್ರೆಯವನ ಕನಸಿಗೆ ಅರ್ಥವನ್ನು ಹೇಳಿದನು. ಅವನು ಬಿಡುಗಡೆ ಹೊಂದಿದಾಗ ಯೋಸೇಫನು ಪಾನಪಾತ್ರೆಯವನ ಬಳಿ ನೀನು ಸುಖದಿಂದಿರುವಾಗ ನನ್ನನ್ನು ಜ್ಞಾಪಕ ಮಾಡಿಕೊಂಡು ನನಗೆ ಉಪಕಾರ ಮಾಡಿ ಫರೋಹನಿಗೆ ನನ್ನ ಸಂಗತಿಯನ್ನು ತಿಳಿಸಿ ನನ್ನನ್ನು ಈ ಸೆರೆಯಿಂದ ಬಿಡಿಸಬೇಕು. ಕೆಲವರು ನನ್ನನ್ನು ಕದ್ದು ಈ ದೇಶಕ್ಕೆ ತಂದರು. ಇಲ್ಲಿಯೂ ನಾನೇನೂ ತಪ್ಪಿಲ್ಲದವನಾಗಿ ಸೆರೆಯಲ್ಲಿ ಬಿದ್ದೆನು ಎಂದು ಹೇಳಿದನು (ಆದಿ. 40:14,15). ಆದರೆ ಆ ಪಾನಪಾತ್ರೆಯವನು ಯೋಸೇಫನನ್ನು ಮರೆತೇಹೋದನು. ವರುಷಗಳು ಉರುಳಿದವು. ಏನೂ ಸಂಭವಿಸಲಿಲ್ಲ. ಒಂದು ವೇಳೆ ಪಾನಪಾತ್ರೆಯವನು ಬಿಡುಗಡೆಯಾದ ಕೂಡಲೇ ಫರೋಹನನ ಬಳಿ ಮಾತನಾಡಿ ಅವನಿಗೆ ಬಿಡುಗಡೆ ದೊರಕಿಸಿಕೊಟ್ಟಿದ್ದಿದ್ದರೆ ಆ ಬಿಡುಗಡೆಯಲ್ಲಿ ಯಾವ ಬೆಲೆಯೂ ಇರುತ್ತಿರಲಿಲ್ಲ. ಒಬ್ಬ ಬಡ ಭಿಕ್ಷುಕನಂತೆ ಜೀವಿಸಿ ತನ್ನ ಓಟವನ್ನು ಯೋಸೇಫನು ಮುಗಿಸುತ್ತಿದ್ದನು. ಮನುಷ್ಯ ಸಹಾಯವನ್ನು ದೊರಕಿಸಿಕೊಡದೇ ಇದ್ದದ್ದರಲ್ಲಿ ದೇವರ ಉದ್ದೇಶ ಒಂದು ಇತ್ತು. ಯೋಸೇಫನು ಐಗುಪ್ತದ ಉನ್ನತ ರಾಜ್ಯಾಧಿಕಾರಿಯಾಗಬೇಕೆಂಬುದೇ ಕರ್ತನ ಉದ್ದೇಶವಾಗಿತ್ತು. ಲಾಜರನು ಅಸ್ವಸ್ಥನಾದಾಗ ಯೇಸು ಬರದೇ ಹೋದದಕ್ಕೆ ಕಾರಣ "ವ್ಯಾಧಿಯಿಂದ ಸ್ವಸ್ಥನಾದವನು" ಎಂಬ ಸಾಕ್ಷಿಗಿಂತ, "ಸತ್ತವರೊಳಗಿಂದ ಜೀವದಿಂದ ಎದ್ದವನು" ಎಂದು ಸಾಕ್ಷಿ ನೀಡುವದು ಕರ್ತನ ಉದ್ದೇಶವಾಗಿತ್ತು.

ದೇವಮಕ್ಕಳೇ, ಯೋಸೇಫನಿಗೆ ಅದ್ಭುತಮಾಡಿ ಉನ್ನತಿಗೆ ತಂದ ದೇವರು, ನಿಮಗೂ ಅದ್ಭುತ ಮಾಡುವನು. ನಿಮಗೆ ಸಹಾಯ ಮಾಡುವ ಪರ್ವತ ಆತನೇ.

*ನೆನಪಿಗೆ : ನಾನು ಕಣ್ಣೆತ್ತಿ ಪರ್ವತಗಳ ಕಡೆಗೆ ನೋಡುತ್ತೇನೆ.... ಭೂಮ್ಯಾಕಾಶಗಳನ್ನು ನಿರ್ಮಿಸಿದ ಯೆಹೋವನಿಂದಲೇ ನನ್ನ ಸಹಾಯವು ಬರುತ್ತದೆ (ಕೀರ್ತ. 121:1–2).*

ಆಗಸ್ಟ್ 13

## ಆಯುಧವಿಲ್ಲದ ಸ್ಥಿತಿಯಲ್ಲಿ!

ಬೆಳಿಗ್ಗೆ : ಕೀರ್ತನೆ 87,88
ಸಂಜೆ : ರೋಮಾ. 13

"ನಾನಾದರೋ ನೀನು ಹೀಯಾಳಿಸಿದಂಥ ಸೇನಾಧೀಶ್ವರನೂ ಇಸ್ರಾಯೇಲ್ಯರ ಯುದ್ಧ ಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ" (1 ಸಮು.17:45)

ನಮ್ಮ ದೇವರು ಇಲ್ಲದ್ದನ್ನು ಇರುವದಾಗಿ ಕರೆಯುವ ದೇವರು. ಇರುಳಿನಿಂದ ಬೆಳಕನ್ನು ಉಂಟುಮಾಡುವ ದೇವರು. ದಾವೀದನ ಜೀವಿತದಲ್ಲಿ ಆಯುಧವಿಲ್ಲದ ಸ್ಥಿತಿಯಲ್ಲಿದ್ದ ಅವನಿಗೆ ಕರ್ತನೇ ಆಯುಧವಾದನು. ಇಷ್ಟು ಚಿಕ್ಕವನಾದ ದಾವೀದನು ದೊಡ್ಡ ರಾಕ್ಷಸಾಕಾರನೂ, ಯುದ್ಧ ವೀರನೂ ಆದ ಗೊಲ್ಯಾತನನ್ನು ಯಾವ ರೀತಿ ಜಯಿಸಲು ಸಾಧ್ಯ ಎಂದು ಇಸ್ರಾಯೇಲ್ಯರೆಲ್ಲರೂ ನೆನಸಿದರು. ದಾವೀದನನ್ನು ನೋಡಿದ ಗೊಲ್ಯಾತನಿಗೂ ಒಂದು ರೀತಿಯ ಗಲಿಬಿಲಿ ಉಂಟಾಗಿರಬಹುದು. ಯಾವ ಶಸ್ತ್ರಾಸ್ತ್ರಗಳೂ ಇಲ್ಲದೆ ಈ ಯೌವನಸ್ಥನು ಹೇಗೆ ಯುದ್ಧರಂಗಕ್ಕೆ ಬಂದಿರುವನು ಎಂದು ಆಶ್ಚರ್ಯಪಟ್ಟನು.

ಸೌಲನು ತನ್ನ ಯುದ್ಧಕವಚವನ್ನೂ, ಶಿರಸ್ತ್ರಾಣವನ್ನೂ ಖಡ್ಗವನ್ನು ಕೊಟ್ಟಾಗಲೂ ಅವುಗಳನ್ನು ದಾವೀದನು ತೆಗೆದುಕೊಳ್ಳಲಿಲ್ಲ. ಯಾಕೆಂದರೆ ದಾವೀದನ ನಂಬಿಕೆ ಕರ್ತನ ಮೇಲೆ ಇತ್ತು. ಕರ್ತನೇ ನನ್ನ ಖಡ್ಗವೂ, ಬಲವೂ, ಆಪತ್ಕಾಲದಲ್ಲಿ ಸಹಾಯಕನಾದಾತನು ಎಂದು ನಂಬಿದ ದಾವೀದನು ಧೈರ್ಯವಾಗಿ ಗೊಲ್ಯಾತನನ್ನು ಯುದ್ಧರಂಗದಲ್ಲಿ ಸಂಧಿಸಿದನು. ದಾವೀದನು ಕ್ಷಣಮಾತ್ರದಲ್ಲಿ ಗೊಲ್ಯಾತನ ಬಲಹೀನವಾದ ಭಾಗ ಅವನ ನೆತ್ತಿ ಎಂಬುದನ್ನು ಕಂಡುಹಿಡಿದನು. ಕಲ್ಲನ್ನು ಕವಣೆಯ ಮೂಲಕ ಬೀಸಿದಾಗ, ಗೊಲ್ಯಾತನ ನೆತ್ತಿಯೊಳಗೆ ಅದು ಆಳವಾಗಿ ಹೊಕ್ಕಿತು. ಅವನು ಬೇರಿಲ್ಲದ ಮರದ ಹಾಗೆ ಕೆಳಕ್ಕೆ ಉರುಳಿದನು. ಆ ಕಲ್ಲನ್ನು ಯಾರಿಂದಲೂ ಹೊರಕ್ಕೆ ತೆಗೆಯಲಸಾಧ್ಯವಾಗಿತ್ತು. ಅದು ಬಲಶಾಲಿಯಾದ ದೇವರ ಕಲ್ಲಾಗಿತ್ತು. ಕೂಡಲೇ, ಅವನ ಸೊಂಟದಲ್ಲಿ ಖಡ್ಗವನ್ನು ಸೆಳೆದುಕೊಂಡ ದಾವೀದನು ಅವನ ತಲೆಯನ್ನು ತುಂಡರಿಸಿದನು. ಹಾಗೆಯೇ ಯೇಸುಕ್ರಿಸ್ತನು ನಿಮ್ಮೊಂದಿಗಿರುವದಾದರೆ ನಿಮ್ಮ ನಂಬಿಕೆ ಆತನ ಮೇಲಿರುವದಾದರೆ ಜಯದ ಮೇಲೆ ಜಯಗಳಿಸುವಿರಿ. ಆತನೇ ನಿಮಗಾಗಿ ಯುದ್ಧ ಮಾಡುವನು.

ದೇವಮಕ್ಕಳೇ ನನಗೆ ಯಾವ ತಲಾಂತು ಇಲ್ಲವೇ: ಚಾತುರ್ಯವಿಲ್ಲವೇ, ವಿದ್ಯೆ ಇಲ್ಲವೇ ಎಂದು ಚಿಂತೆ ಮಾಡಬೇಡಿ. ಕರ್ತನು ಎಲ್ಲವನ್ನೂ ನೋಡಿಕೊಳ್ಳುವನು. ಆತನು ಯೆಹೋವಯೀರೆ ಆಗಿರುವನು. ಯಾವ ಶತ್ರುವೂ ನಿಮ್ಮನ್ನು ಜಯಿಸಲಾಗದು. ನಿಮ್ಮೊಳಗಿರುವವನು ಈ ಲೋಕದಲ್ಲಿರುವವನಿಗಿಂತ ಹೆಚ್ಚಿನವನು. ಕ್ರಿಸ್ತನ ಬಾಯಿಂದ ಹೊರಡುವ ವಾಕ್ಯವೆಂಬ ಆತ್ಮೀಕ ಖಡ್ಗವನ್ನು ಮಾತ್ರ ಸದಾ ನಿಮ್ಮೊಂದಿಗೆ ಇಟ್ಟುಕೊಳ್ಳಿರಿ.

*ನೆನಪಿಗೆ : ನೀವು ಯೆಹೋವನ ಅನುಗ್ರಹದಿಂದ ಜಯವನ್ನು ಹೊಂದಿದವರು. ಆತನೇ ನಿಮ್ಮನ್ನು ಕಾಯುವ ಡಾಲೂ ನಿಮ್ಮ ಗೌರವವನ್ನು ಕಾಪಾಡುವ ಕತ್ತಿಯೂ ಆಗಿದ್ದಾನೆ. ಆದುದರಿಂದ ನಿಮ್ಮ ಶತ್ರುಗಳು ನಿಮ್ಮ ಮುಂದೆ ಮುದುರಿಕೊಳ್ಳುತ್ತಾರೆ. ನೀವೋ ಅವರಿಗಿದ್ದ ಎತ್ತರವಾದ ಸೀಮೆಯಲ್ಲಿ ಜಯಶಾಲಿಗಳಾಗಿ ಸಂಚರಿಸುವಿರಿ (ಧರ್ಮೋ. 33:29).*



ಆಗಸ್ಟ್ 14

## ಶರೀರದಿಂದ ಘನಪಡಿಸಿರಿ!

ಬೆಳಿಗ್ಗೆ : ಕೀರ್ತನೆ 89,90
ಸಂಜೆ : ರೋಮಾ. 14

ನೀವು ನಿಮ್ಮ ಸ್ವಂತ ಸೊತ್ತಲ್ಲ. ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು; ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ (1 ಕೊರಿಂ. 6:20).

ಕೆಲವು ಆಲಯಗಳಲ್ಲಿ "ದೇವರನ್ನು ಮಹಿಮೆ ಪಡಿಸೋಣ" ಎಂದು ಹೇಳಿದ ಕೂಡಲೆ, ವಿಶ್ವಾಸಿಗಳು "ಸ್ತೋತ್ರ, ಸ್ತೋತ್ರ" ಎಂದು ಹೇಳುವರು. ಕೆಲವರು "ಹಲ್ಲೆಲೂಯ" ಎಂದು ಹೇಳಿ ಆರ್ಭಟಿಸುವರು. ಕೆಲವರು ಅನ್ಯಭಾಷೆ ಮಾತಾಡಿ ಕರ್ತನನ್ನು ಮಹಿಮೆಪಡಿಸುವರು. ಯಾವದು ಹೇಗಿದ್ದರೂ ಸರಿ, ಆತನು ನಮ್ಮನ್ನು ಸೃಷ್ಟಿಸಿರುವದರಿಂದ ನಮಗೋಸ್ಕರ ತನ್ನ ಪ್ರಾಣವನ್ನೇ ಕೊಟ್ಟಿರುವದರಿಂದ ನಾವು ಕರ್ತನನ್ನು ಮಹಿಮೆ ಪಡಿಸಬೇಕು.

ಅಪೊ. ಪೌಲನು, ಕೊರಿಂಥ ಸಭೆಯವರಿಗೆ ಬರೆಯುವಾಗ ನೀವು ನಿಮ್ಮ ಸ್ವಂತ ಸೊತ್ತಲ್ಲ, ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು ಎಂದು ಬರೆಯುತ್ತಾನೆ (1 ಕೊರಿಂ. 6:20). ಹೌದು ನಾವು ದೇವರ ಸೊತ್ತಾಗಿರುವದರಿಂದ ನಾವು ಆತನ ಪ್ರಭಾವವನ್ನು ನಮ್ಮ ದೇಹಗಳಲ್ಲಿ ಪ್ರಕಾಶ ಪಡಿಸುತ್ತಾ ಆತನನ್ನು ಮಹಿಮೆಪಡಿಸುವ ಹಂಗಿನಲ್ಲಿದ್ದೇವೆ. ಪೌಲನು ತನ್ನ ಸ್ವಂತ ಅನುಭವವನ್ನು ಕುರಿತು ಹೀಗೆ ಬರೆಯುತ್ತಾನೆ "ನಾನು ಬದುಕಿದರೂ ಸರಿಯೇ ಸತ್ತರೂ ಸರಿಯೇ ನನ್ನ ದೇಹದ ಮೂಲಕ ಕ್ರಿಸ್ತನಿಗೆ ಮಹಿಮೆ ಉಂಟಾಗಬೇಕೆಂದು ನನಗೆ ಬಹಳ ಅಭಿಲಾಷೆಯಿದೆ; ಹಾಗೆಯೇ ಆಗುವದೆಂದು ಭರವಸವುಂಟು" ಎಂದು (ಫಿಲಿ. 1:20). ದೇವರು ನಿಮಗೆ ತನ್ನ ಕೃಪೆಯಿಂದ ಬಹುಮಾನವಾಗಿ ಶರೀರವನ್ನು ಕೊಟ್ಟಿರುವನು. ನಿಮಗೆ ಕೊಟ್ಟ ಶರೀರದಿಂದ ಕರ್ತನನ್ನು ಮಹಿಮೆಪಡಿಸಿರಿ. 1 ಕೊರಿಂಥ 9:27ರಲ್ಲಿ ಪೌಲನು ಇತರರನ್ನು ಹೋರಾಟಕ್ಕೆ ಕರೆದ ಮೇಲೆ ನಾನೇ ಅಯೋಗ್ಯನೆನಿಸಿಕೊಂಡೆನೋ ಎಂಬ ಭಯದಿಂದ ನನ್ನ ಮೈಯನ್ನು ಜಜ್ಜಿ ಸ್ವಾಧೀನ ಪಡಿಸಿಕೊಳ್ಳುತ್ತೇನೆ ಎಂದು ಬರೆಯುತ್ತಾನೆ. ಕೆಲವು ಭಾಷಾಂತರಗಳಲ್ಲಿ ನಾನು ನಿಷ್ಪ್ರಯೋಜಕನು, ಯೋಗ್ಯತೆಯಿಲ್ಲದವನು ಎಂದು ತಿರಸ್ಕರಿಸಲ್ಪಡದಂತೆ ಶರೀರವನ್ನು ಜಜ್ಜಿ ನಿಯಂತ್ರಿಸಿ ಸ್ವಾಧೀನಪಡಿಸಿಕೊಳ್ಳುವೆನು ಎಂದು ಹೇಳಲ್ಪಟ್ಟಿದೆ.

ದೇವಮಕ್ಕಳೇ, ನೀವು ಅಶಕ್ತರಾ, ಇಲ್ಲವೇ ಶಕ್ತರಾ ಎಂಬುದನ್ನು ನಿರ್ಧರಿಸುವದು ನಿಮ್ಮ ಶರೀರವೇ. ಆದ್ದರಿಂದ ನಿಮ್ಮ ಶರೀರಗಳನ್ನು ಕರ್ತನಿಗೆಂದು ಸಜೀವ ಯಜ್ಞವಾಗಿ ಒಪ್ಪಿಸಿಕೊಟ್ಟು ಯಾವಾಗಲೂ ನಿಮ್ಮ ಶರೀರಗಳಿಂದ ದೇವರನ್ನು ಮಹಿಮೆಪಡಿಸಿರಿ.

*ನೆನಪಿಗೆ : ನನ್ನೊಡನೆ ಯೆಹೋವನನ್ನು ಕೊಂಡಾಡಿರಿ; ನಾವು ಒಟ್ಟಾಗಿ ಆತನ ಹೆಸರನ್ನು ಘನಪಡಿಸೋಣ (ಕೀರ್ತ. 34:3).*

ಆಗಸ್ಟ್ 15

## ಮೋಶೆಯ ಶರೀರ!

ಬೆಳಿಗ್ಗೆ : ಕೀರ್ತನೆ 91,92,93
ಸಂಜೆ : ರೋಮಾ. 15:1–13

ಪ್ರಧಾನ ದೇವದೂತನಾದ ಮೀಕಾಯೇಲನು ಮೋಶೆಯ ಶವದ ವಿಷಯದಲ್ಲಿ ಸೈತಾನನೊಂದಿಗೆ ವ್ಯಾಜ್ಯವಾಡಿ ವಾಗ್ವಾದ ಮಾಡಿದಾಗ (ಯೂದ. 1:9).

ಭಕ್ತನಾದ ಮೋಶೆ ಜೀವಿಸಿದ ವರ್ಷಗಳು 120. ಪೂರ್ಣಾಯುಷ್ಯನಾಗಿ, ನೊಬೋ ಬೆಟ್ಟದಲ್ಲಿರುವ ಪಿಸ್ಗಾ ಶಿಖರದಲ್ಲಿ ಮರಣಹೊಂದಿದಾಗ, ಆತನ ಶರೀರದ ವಿಷಯದಲ್ಲಿ ಸೈತಾನನಿಗೂ ಪ್ರಧಾನ ದೇವದೂತನಾದ ಮಿಕಾಯೇಲನಿಗೂ ವಾಗ್ವಾದ ಉಂಟಾಯಿತು.

ಮೋಶೆ ದೇವರಿಂದ ಆರಿಸಲ್ಪಟ್ಟ ಒಬ್ಬ ದೇವ ಮನುಷ್ಯನು ಕರ್ತನು ಮೋಶೆಯೊಂದಿಗೆ ಇದ್ದು, ಸುಮಾರು ಮೂವತ್ತು ಲಕ್ಷ ಇಸ್ರಾಯೇಲ್ಯರನ್ನು, ನಾಲ್ವತ್ತು ವರ್ಷಗಳು ಅರಣ್ಯದಲ್ಲಿ ನಡೆಸಿ ಹಾಲೂ, ಜೇನೂ ಹರಿಯುವ ಕಾನಾನ್ ದೇಶದ ಸಮೀಪಕ್ಕೆ ಕರೆತಂದನು. ದೇವರೊಂದಿಗೆ ಮುಖಾಮುಖಿಯಾಗಿ ಮಾತಾಡಿದನು. ದಶಾಜ್ಞೆಗಳನ್ನು ದೇವರ ಹಸ್ತಗಳಿಂದ ಪಡೆದನು. ಎರಡು ಬಾರಿ ನಾಲ್ವತ್ತು ದಿನಗಳು ಉಪವಾಸ ಮಾಡಿದನು. ದೇವರೊಂದಿಗೆ ಮಾತಾಡಿದ್ದರಿಂದ ಅವನ ಮುಖ ಪ್ರಕಾಶದಿಂದ ತುಂಬಿತ್ತು. ಆದರೂ ಏನಾಶ್ಚರ್ಯ! ಮೋಶೆ ಮರಣಹೊಂದಿದಾಗ, ಅವನ ಶರೀರವನ್ನು ಕುರಿತು ಸೈತಾನನು ಮೀಕಾಯೇಲ್ ದೂತನೊಂದಿಗೆ ವಾಗ್ವಾದ ಮಾಡಿದನು. ಹೆಸರು ಹೊಗಳಿಕೆ ಹೊಂದಿದ ದೇವಮನುಷ್ಯನಾದ ಮೋಶೆ ಶರೀರವನ್ನು ಕುರಿತು ಸೈತಾನನು ಅವನು ತನ್ನ ಸೊತ್ತೆಂದು ವಾಗ್ವಾದ ಮಾಡಿರುವಾಗ, ನಾನೂ ನೀವೂ ನಮ್ಮ ಶರೀರವನ್ನು ಕಾಪಾಡಿಕೊಳ್ಳಲು ಇನ್ನು ಎಷ್ಟರ ಮಟ್ಟಿಗೆ ದೈವಭಕ್ತಿಯೊಂದಿಗೆ ಪರಿಶುದ್ಧವಾಗಿಟ್ಟುಕೊಳ್ಳಬೇಕು. ನೂರಕ್ಕೆ ನೂರರಷ್ಟು ಕರ್ತನಿಗೆ ವಿಧೇಯರಾಗಿರಬೇಕಲ್ಲವೇ! ನಿಮ್ಮ ಶರೀರ ಈ ಭೂಮಿಯಲ್ಲಿ ಜೀವಿಸಿರುವಷ್ಟು ಕಾಲವೂ ಕರ್ತನಿಗೆ ವಿಧೇಯವಾಗಿ ಆತನನ್ನು ಮಹಿಮೆಪಡಿಸಬೇಕೆಂದೇ ನಿಮಗೆ ಕೊಡಲ್ಪಟ್ಟಿದೆಯೇ ವಿನಃ ನಿಮ್ಮ ಸುಖಭೋಗಕ್ಕಾಗಿಯೋ, ಇಚ್ಛೆಗಳನ್ನು ಪೂರೈಸಿಕೊಳ್ಳುವದಕ್ಕಾಗಿಯೋ ಸೈತಾನನು ಉಪಯೋಗಿಸುವದಕ್ಕಾಗಿಯೋ ಕೊಡಲ್ಪಡಲಿಲ್ಲ. ಕೆಲವರು ಹಣಕ್ಕಾಗಿ ಹೆಸರು ಹೊಗಳಿಕೆಗಾಗಿ ತಮ್ಮನ್ನು ಮಾರಿಕೊಳ್ಳುವರು. ಅಂಥಹವರ ಶರೀರಗಳ ಮೇಲೆ ಸೈತಾನನು ಸುಲಭವಾಗಿ ತನ್ನ ಅಧಿಕಾರ ಚಲಾಯಿಸಿ ಪಾತಾಳಕ್ಕೆ ತೆಗೆದುಕೊಂಡು ಹೋಗಿಬಿಡುವನು.

ದೇವಮಕ್ಕಳೇ, ಈ ಶರೀರ ನಿಮ್ಮ ತಂದೆತಾಯಿಗಳ ಚಿತ್ತಕ್ಕೆ ಒಳಪಟ್ಟಂತೆ ಕಂಡರೂ ನಿಜವಾಗಿಯೂ ನಿಮ್ಮನ್ನು ಸೃಷ್ಟಿಸಿದಾತನು ದೇವರೇ! ಎಷ್ಟೋ ಅದ್ಭುತವಾಗಿಯೂ ವಿಚಿತ್ರವಾಗಿಯೂ ನಿಮ್ಮ ಶರೀರವನ್ನು ಸೃಷ್ಟಿಸಿರುವನು. ನಿಮ್ಮ ಶರೀರಾತ್ಮಗಳನ್ನು ತನ್ನ ನಾಮದ ಮಹಿಮೆಗೆಂದೇ ತನ್ನ ರಕ್ತವನ್ನು ಕ್ರಯಕ್ಕೆ ಕೊಟ್ಟು ರಕ್ಷಿಸಿರುವನು. ನಿಮ್ಮ ಶರೀರಗಳನ್ನು ಕರ್ತನ ಆಲಯವಾಗಿ ಮಾರ್ಪಡಿಸಿ, ದೇವರನ್ನು ಮಹಿಮೆಪಡಿಸಿರಿ.

*ನೆನಪಿಗೆ : ದೇವರಿಗೆ ಭಯಪಟ್ಟು ಆತನನ್ನು ಘನಪಡಿಸಿರಿ. ಆತನು ನ್ಯಾಯತೀರ್ಪು ಮಾಡುವ ಗಳಿಗೆಯು ಬಂದಿದೆ (ಪ್ರಕ. 14:7).*



ಆಗಸ್ಟ್ 16

## ಅರಿಕೆ ಮಾಡಿ ಘನಪಡಿಸು!

ಬೆಳಿಗ್ಗೆ : ಕೀರ್ತನೆ 94,95,96
ಸಂಜೆ : ರೋಮಾ. 15:14–33

ಯೆಹೋಶುವನು ಆಕಾನನಿಗೆ ನನ್ನ ಮಗನೇ, ನೀನು ಇಸ್ರಾಯೇಲ್ ದೇವರಾದ ಯೆಹೋವನನ್ನು ಘನಪಡಿಸಿ ಆತನಿಗೆ ಸ್ತೋತ್ರಸಲ್ಲಿಸು. ನೀನು ಮಾಡಿದ್ದನ್ನು ನನಗೆ ಹೇಳು. ಯಾವದನ್ನೂ ಮುಚ್ಚಿಡಬೇಡ ಅಂದನು. (ಯೆಹೋ. 7:19).

ನಾಲ್ವತ್ತು ವರ್ಷಗಳು ಅರಣ್ಯದಲ್ಲಿ ಪ್ರಯಾಣ ಮಾಡಿದ ಇಸ್ರಾಯೇಲ್ಯರು ಕೊನೆಯಲ್ಲಿ ಯೊರ್ದನ್ ಹೊಳೆಯನ್ನು ದಾಟಿ ಕಾನಾನ್ ದೇಶದೊಳಗೆ ಪ್ರವೇಶಿಸಿದರು. ಅಲ್ಲಿ ಅವರು ಸಂಧಿಸಿದ ಮೊದಲ ಪಟ್ಟಣ ಯೆರಿಕೋ. ಆದರೆ ಆ ಯೆರಿಕೋ ಪಟ್ಟಣ ಇಸ್ರಾಯೇಲ್ಯರಿಗೆ ಮುಚ್ಚಲ್ಪಟ್ಟಿತು (ಯೆಹೋ. 6:1). ದೇವರು ಯೆಹೋಶುವನನ್ನು ನೋಡಿ "ನಾನು ಯೆರಿಕೋವನ್ನು ಅದರ ಅರಸನನ್ನೂ ಯುದ್ಧ ವೀರರನ್ನೂ ನಿನ್ನ ಕೈಗೆ ಒಪ್ಪಿಸಿದ್ದೇನೆ" (ಯೆಹೋ. 6:2) ಎಂದು ಹೇಳಿದನು.

ಯೆಹೋಶುವನು ಆ ಸಮಯದಲ್ಲಿ ಇಸ್ರಾಯೇಲ್ಯರಿಗೆ ಒಂದು ಎಚ್ಚರಿಕೆಯನ್ನು ಕೊಟ್ಟನು. ಈ ಪಟ್ಟಣವು ಇದರಲ್ಲಿರುವದೆಲ್ಲವೂ ಕೇವಲ ಯೆಹೋವನ ಸೊತ್ತೇ ಎಂದು ತಿಳಿಯಿರಿ. ಯೆಹೋವನಿಗೆ ಮೀಸಲಾದ ವಸ್ತುಗಳ ವಿಷಯದಲ್ಲಿ ಜಾಗರೂಕತೆಯಿಂದಿರಬೇಕು. ನೀವು ಅವುಗಳಲ್ಲಿ ಯಾವದನ್ನಾದರೂ ತೆಗೆದುಕೊಂಡರೆ ಇಸ್ರಾಯೇಲ್ಯರ ಪಾಳೆಯವು ಶಾಪಕ್ಕೆ ಗುರಿಯಾಗಿ ಕೆಟ್ಟೀತು ಅಂದನು (ಯೆಹೋ. 6:17–18). ಆದರೆ ಆಕಾನನೆಂಬುವನೊಬ್ಬನು ಶಿನಾರ್ ದೇಶದ ಒಂದು ಉತ್ತಮವಾದ ನಿಲುವಂಗಿಯನ್ನು ಇನ್ನೂರು ರೂಪಾಯಿ ತೂಕದ ಬೆಳ್ಳಿಯನ್ನೂ, ಐವತ್ತು ರೂಪಾಯಿ ತೂಕದ ಬಂಗಾರದ ಗಟ್ಟಿಯನ್ನೂ ಕಂಡು ಆಶೆಪಟ್ಟು ತನ್ನ ಗುಡಾರದಲ್ಲಿ ಬಚ್ಚಿಟ್ಟನು. ಇದರಿಂದ ಯೆರಿಕೋ ನಂತರ ಆಯಿ ಎಂಬ ಪಟ್ಟಣದಲ್ಲಿ ನಡೆದ ಯುದ್ಧದಲ್ಲಿ ಇಸ್ರಾಯೇಲ್ಯರು ಅಪಜಯಕ್ಕೆ ಒಳಗಾದರು. ಆಗ ಯೆಹೋಶುವನು ಇಸ್ರಾಯೇಲ್ಯರ ಹಿರಿಯರು ಕರ್ತನಿಗೆ ಮೊರೆಯಿಟ್ಟರು. ಆಗ ಕರ್ತನು "ಶಾಪಕ್ಕೆ ಕಾರಣವಾದದ್ದನ್ನು ನಿಮ್ಮ ಮಧ್ಯದಿಂದ ತೆಗೆದು ಹಾಕುವವರೆಗೆ ನಾನು ನಿಮ್ಮ ಸಂಗಡ ಬರುವದಿಲ್ಲ. ಜನರನ್ನು ಶುದ್ಧಪಡಿಸು" ಎಂದು ಹೇಳಿದನು (ಯೆಹೋ. 7:12). ಚೀಟು ಹಾಕಿದಾಗ ಆಕಾನನು ಸಿಕ್ಕಿಬಿದ್ದನು. ಪಾಪವನ್ನು ಮರೆಮಾಡುವದು ಯಾರಿಂದಲೂ ಸಾಧ್ಯವಿಲ್ಲ. ಅಂತರಂಗದಲ್ಲಿ ಮಾಡುವ ಪಾಪ ನಿಶ್ಚಯವಾಗಿ ಬಹಿರಂಗವಾಗುವದು.

ದೇವಮಕ್ಕಳೇ, ಪಾಪವನ್ನು ಎರಡು ಭಾಗವಾಗಿ ವಿಂಗಡಿಸಬಹುದು. 1. ತಿಳಿಯದೇ ಮಾಡುವ ಪಾಪ, 2. ತಿಳಿದೂ ತಿಳಿದೂ ಮಾಡುವ ಪಾಪ. ಯಾವದೇ ಆಗಿರಲಿ ದೇವರ ಮುಂದೆ ಅರಿಕೆ ಮಾಡಿ ತಪ್ಪನ್ನು ಒಪ್ಪಿಕೊಂಡು ಪಶ್ಚಾತ್ತಾಪ ಪಡುವಿರಾದರೆ ಕರ್ತನು ನಿಶ್ಚಯವಾಗಿ ತನ್ನ ಕನಿಕರವನ್ನು ತೋರಿಸುವನು. ನಮ್ಮ ತಪ್ಪುಗಳನ್ನು ಕರ್ತನ ಮುಂದೆ ಅರಿಕೆ ಮಾಡುವಾಗ ಆತನನ್ನು ನಾವು ಘನಪಡಿಸುತ್ತೇವೆ.

*ನೆನಪಿಗೆ : ದೋಷಗಳನ್ನು ಮುಚ್ಚಿಕೊಳ್ಳುವವನಿಗೆ ಶುಭವಾಗದು. ಅವುಗಳನ್ನು ಒಪ್ಪಿಕೊಂಡು ಬಿಟ್ಟುಬಿಡುವವನಿಗೆ ಕರುಣೆ ದೊರೆಯುವದು (ಜ್ಞಾನೋ. 28:13).*

ಆಗಸ್ಟ್ 17

## ದೇವರನ್ನು ಮಹಿಮೆಪಡಿಸಿರಿ!

ಬೆಳಿಗ್ಗೆ : ಕೀರ್ತನೆ 97,98,99
ಸಂಜೆ : ರೋಮಾ. 16

ನಿಮ್ಮ ನಡವಳಿಕೆಯು ಅನ್ಯಜನರ ಮಧ್ಯದಲ್ಲಿ ಯೋಗ್ಯವಾಗಿರಲಿ; ಆಗ ಅವರು ಯಾವ ವಿಷಯದಲ್ಲಿ ನಿಮ್ಮನ್ನು ಅಕ್ರಮಗಾರರೆಂದು ನಿಂದಿಸುತ್ತಾರೋ, ಆ ವಿಷಯದಲ್ಲಿಯೇ ನಿಮ್ಮ ಸತ್ಕ್ರಿಯೆಗಳನ್ನು ಕಣ್ಣಾರೆ ಕಂಡು ವಿಚಾರಣೆಯ ದಿನದಲ್ಲಿ ದೇವರನ್ನು ಕೊಂಡಾಡುವರು (1ಪೇತ್ರ.2:12).

ದಾನಿಯೇಲನು ನೆಬೂಕದ್ನೆಚ್ಚರನಿಂದ ಸೆರೆಹಿಡಿಯಲ್ಪಟ್ಟು ಬ್ಯಾಬಿಲೋನಿಗೆ ಬಂದಾಗ, ಅನ್ಯದೇಶಕ್ಕೆ ಬಂದಿದ್ದೇನೆ. ರಾಜನ ಸೇವೆಗೆ ಆರಿಸಲ್ಪಟ್ಟಿದ್ದೇನೆ. ಇನ್ನು ಸಂತೋಷದಿಂದ ಮನಬಂದಂತೆ, ಜೀವಿಸಬಹುದು ಎಂದು ಯೋಚಿಸಲಿಲ್ಲ. ಅವನು ತನ್ನ ಶರೀರದಿಂದಲೂ ಆತ್ಮದಿಂದಲೂ ದೇವರನ್ನು ಮಹಿಮೆಪಡಿಸಲು ತೀರ್ಮಾನಿಸಿದನು (1 ಕೊರಿಂ. 6:20).

ನೆಬೂಕದ್ನೆಚ್ಚರನು ಆರಿಸಿಕೊಂಡ ಯೌವನಸ್ಥರಿಗೆ ರಾಜಭೋಜನವನ್ನು ಕೊಟ್ಟು ಪೋಷಿಸಬೇಕೆಂದು ಕಂಚುಕಿಯರ ಮುಖ್ಯಸ್ಥನಿಗೆ ಆಜ್ಞೆ ಮಾಡಿದ್ದನು. ಆದರೆ ದಾನಿಯೇಲ ಮತ್ತು ಅವನ ಸ್ನೇಹಿತರಾದ ಶದ್ರಕ್, ಮೇಷಕ್, ಅಬಿದ್ನೆಗೋ ಎಂಬುವವರು ರಾಜಭೋಜನದಿಂದಲೂ, ಅರಸನು ಕುಡಿಯುವ ದ್ರಾಕ್ಷಾರಸದಿಂದಲೂ ತಮ್ಮನ್ನು ಅಶುದ್ಧಪಡಿಸಿಕೊಳ್ಳಬಾರದೆಂದು ತೀರ್ಮಾನಿಸಿದರು (ದಾನಿ. 1:8). ಬರೀ ಕಾಯಿಪಲ್ಯವನ್ನು ಸೇವಿಸಲು ತೀರ್ಮಾನಿಸಿದರು. ನಾವು ಯಾಕೆ ಧೂಮಪಾನ ಮಾಡಬಾರದು? ಯಾಕೆ ಮಧುಪಾನ ಮಾಡಬಾರದು? ನಮ್ಮ ಶರೀರವು ಕರ್ತನು ನಮಗೆ ಕೊಟ್ಟ ಬಹುಮಾನ. ಅದರೊಳಗೆ ರಾಜಾಧಿರಾಜನು ತಂಗಿರುವನು. ನಮ್ಮ ಶರೀರ ದೇವರ ಆಲಯವಾಗಿದೆ. "ಯಾವನಾದರೂ ದೇವರ ಆಲಯವನ್ನು ಕೆಡಿಸಿದರೆ ದೇವರು ಅವನನ್ನು ಕೆಡಿಸುವನು. ಯಾಕೆಂದರೆ ದೇವರ ಆಲಯವು ಪವಿತ್ರವಾದದ್ದು. ಆ ಆಲಯವು ನೀವೇ" (1 ಕೊರಿಂ. 3:17) ಎಂದು ಅಪೊ. ಪೌಲನು ಬರೆಯುತ್ತಾನೆ. ಶದ್ರಕ್, ಮೇಷಕ್, ಅಬಿದ್ನೆಗೋ ಏನು ಹೇಳಿದರು? ಕರ್ತನು ನಮ್ಮನ್ನು ಈ ಶರೀರದಲ್ಲಿ ಇಟ್ಟಿರುವವರೆಗೂ ನಾವು ವಿಗ್ರಹಾರಾಧನೆ ಮಾಡುವದಿಲ್ಲ ಎಂದರು. ಅವರನ್ನು ಉರಿಯುವ ಆವಿಗೆಯಲ್ಲಿ ಹಾಕಿದಾಗಲೂ ಅಗ್ನಿ ಅವರ ಶರೀರಗಳನ್ನು ಮುಟ್ಟಲಾಗಲಿಲ್ಲ. ದಾನಿಯೇಲನನ್ನು ಸಿಂಹಗಳ ಗವಿಯಲ್ಲಿ ಹಾಕಿದಾಗ ಸಿಂಹಗಳು ಅವನ ಶರೀರವನ್ನು ಮುಟ್ಟಲಾಗಲಿಲ್ಲ.

ದೇವಮಕ್ಕಳೇ, ನಿಮ್ಮ ಶರೀರ ದೇವರನ್ನು ಮಹಿಮೆ ಪಡಿಸುವ ಶರೀರವಾ? ಮಹಿಮೆ ಪಡಿಸದ ಶರೀರವಾ? ನಿಮ್ಮ ಶರೀರಗಳನ್ನು ಕರ್ತನಿಗೆಂದು ಪ್ರತಿಷ್ಠೆ ಮಾಡಿರಿ. ದೇವರು ಆತನಲ್ಲಿ ಮಹಿಮೆ ಪಟ್ಟಿರಲಾಗಿ ತನ್ನಲ್ಲಿ ದೇವರು ಆತನನ್ನೂ ಮಹಿಮೆ ಪಡಿಸುವನು. ಕೂಡಲೇ ಮಹಿಮೆ ಪಡಿಸುವನು (ಯೋಹಾ. 13:32).

*ನೆನಪಿಗೆ : ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೆಯ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು (ಮತ್ತಾ.5:16).*



ಆಗಸ್ಟ್ 18

## ಮಹಿಮೆ ಪಡಿಸಿದನು!

ಬೆಳಿಗ್ಗೆ :ಕೀರ್ತನೆ 100,101,102
ಸಂಜೆ : 1 ಕೊರಿಂ. 1

ಆಗ ಸಂಸೋನನು ಯೆಹೋವನಿಗೆ ಕರ್ತನೇ, ಯೆಹೋವನೇ, ಫಿಲಿಷ್ಟಿಯರು ಕಿತ್ತುಹಾಕಿದ ನನ್ನ ಎರಡೂ ಕಣ್ಣುಗಳಲ್ಲಿ ಒಂದಕ್ಕೋಸ್ಕರವಾದರೂ ನಾನು ಅವರಿಗೆ ಮುಯ್ಯಿ ತೀರಿಸುವ ಹಾಗೆ ನನ್ನನ್ನು ಈ ಸಾರಿ ಬಲಪಡಿಸು ಎಂದು ಮೊರೆಯಿಟ್ಟನು (ನ್ಯಾಯ. 16:28).

ಎಲ್ಲಾ ಪ್ರಾರ್ಥನೆಗಳಿಗಿಂತಲೂ ಪರಿತಾಪಕರವಾದ ಒಂದು ಪ್ರಾರ್ಥನೆ ಎಂದರೆ ಸಂಸೋನನು ಮಾಡಿದ ಪ್ರಾರ್ಥನೆ. ಕರ್ತನು ಸಂಸೋನನ ಮೇಲೆ ಅತಿಯಾದ ನಿರೀಕ್ಷೆ ಇಟ್ಟುಕೊಂಡು ಪ್ರಕೃತಿ ಸಹಜವಾದ ಬಲಕ್ಕಿಂತಲೂ ಉನ್ನತವಾದ ಬಲದಿಂದ ಅವನನ್ನು ತುಂಬಿಸಿದ್ದನು. ಇಸ್ರಾಯೇಲ್ಯರೂ, ಸಂಸೋನನ ಮೇಲೆ ಅಧಿಕವಾದ ನಂಬಿಕೆಯನ್ನಿಟ್ಟು ಅವನ ಮೂಲಕ ಕರ್ತನು ತಮ್ಮನ್ನು ಫಿಲಿಷ್ಟಿಯರ ದಾಸತ್ವದಿಂದ ರಕ್ಷಿಸಿ ಬಿಡುಗಡೆಗೊಳಿಸುವನು ಎಂದು ಭಾವಿಸಿದ್ದರು.

ಸಂಸೋನನು ಜನಿಸುವದಕ್ಕೆ ಮೊದಲೇ ಅವನನ್ನು ಹೆತ್ತವರು ದೇವದೂತನ ಆಲೋಚನೆಗಳನ್ನು ಪಡೆದು, ಎಷ್ಟೋ ನೇಮನಿಷ್ಠೆಯಿಂದ ಅವನನ್ನು ಬೆಳೆಸಿದರು. ಆದರೆ ಸಂಸೋನನಾದರೋ ತನ್ನ ಮೇಲೆ ನಂಬಿಕೆ ಇಟ್ಟವರೆಲ್ಲರನ್ನೂ ಮೋಸಗೊಳಿಸಿದನು. ತನಗೆ ಕೊಟ್ಟ ಶರೀರವನ್ನು ಕರ್ತನ ನಾಮದ ಮಹಿಮೆಗಾಗಿ ಉಪಯೋಗಿಸಲಿಲ್ಲ. ತನ್ನ ಇಚ್ಛೆಗಳನ್ನು ನೆರವೇರಿಸಲು ಉಪಯೋಗಿಸಿದನು. ಇಸ್ರಾಯೇಲ್ಯರ ಹೆಣ್ಣನ್ನು ಮದುವೆಯಾಗದೆ ಫಿಲಿಷ್ಟಿಯ ಹೆಣ್ಣುಗಳನ್ನು ಬಯಸಿ, ವ್ಯಭಿಚಾರದಲ್ಲಿ ಬಿದ್ದನು. ತನ್ನ ಕುರಿತಾದ ದೇವರ ಉದ್ದೇಶ ಏನಾಗಿದೆ? ಚಿತ್ತವೇನು? ಎಂದು ತಿಳಿದುಕೊಳ್ಳದೆ ದೇವರಾತ್ಮನಿಂದ ನಡೆಸಲ್ಪಡದೆ, ಇಚ್ಛೆಯ ಆತ್ಮನಿಂದ ನಡೆಸಲ್ಪಟ್ಟನು. ಒಮ್ಮೆ ಅವನು ತಿಮ್ನಾ ಊರಿನ ದ್ರಾಕ್ಷೆಯ ತೋಟದ ಬಳಿಗೆ ಬಂದಾಗ, ಒಂದು ಪ್ರಾಯದ ಸಿಂಹವು ಗರ್ಜಿಸುತ್ತಾ ಅವನ ಮೇಲೆ ಎರಗಿತು. ದೇವರಾತ್ಮನೋ ಫಕ್ಕನೆ ಅವನ ಮೇಲೆ ಬಂದದ್ದರಿಂದ ಆ ಸಿಂಹವನ್ನು ಸೀಳಿಹಾಕಿದನು. ಆದರೆ ಆ ವಿಷಯವನ್ನು ತಂದೆ ತಾಯಿಗಳಿಗೆ ಹೇಳಲಿಲ್ಲ. ಸ್ವಲ್ಪ ದಿನಗಳ ಬಳಿಕ ಅವರು ಅದೇ ದಾರಿಯಲ್ಲಿ ಬರುವಾಗ ಆ ಸತ್ತ ಸಿಂಹದ ಒಡಲಲ್ಲಿ ಜೇನುಗೂಡು ಕಟ್ಟಿತ್ತು. ಸಂಸೋನನು ಆ ಜೇನನ್ನು ಕಿತ್ತು ತಿಂದು ತನ್ನ ತಂದೆ ತಾಯಿಗಳಿಗೂ ಕೊಟ್ಟನು. ಅರಣ್ಯಕಾಂಡ 6ನೇ ಅಧ್ಯಾಯದಲ್ಲಿರುವಂತೆ ನಾಜೀರನು ಸತ್ತ ಹೆಣವನ್ನು ಮುಟ್ಟಬಾರದು. ಮುಟ್ಟಿದರೆ ಶುದ್ಧೀಕರಣ ನಡೆಸಬೇಕು. ತಂದೆ ತಾಯಿಗಳಿಗೆ ಹೇಳಿದ್ದಿದ್ದರೆ ಅವರು ಶುದ್ಧೀಕರಣ ನಡೆಸುತ್ತಿದ್ದರು. ಆದರೆ ಆ ಸಂಗತಿಯನ್ನು ಮುಚ್ಚಿಟ್ಟು ದೇವರ ನಿಯಮವನ್ನು ಮೀರಿದನು ಮತ್ತು ದೇವರಾತ್ಮನ ನಡೆಸುವಿಕೆಯಿಂದ ದೂರವಾದನು.

ದೇವಮಕ್ಕಳೇ,ಕರ್ತನು ನಿಮ್ಮನ್ನು ಆಳಲಿ, ಯಾರ್ಯಾರು ದೇವರಾತ್ಮನಿಂದ ನಡೆಸಲ್ಪಡುವರೋ, ಅವರೇ ದೇವರ ಮಕ್ಕಳಾಗಿರುವರು. ಅಶುದ್ಧರಾಗದೆ, ಪರಿಶುದ್ಧವಾದ ಜೀವಿತ ನಡೆಸಿರಿ.

*ನೆನಪಿಗೆ : "ಶರೀರಭಾವವನ್ನು ಅನುಸರಿಸುವವರು ಅದಕ್ಕೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಪವಿತ್ರಾತ್ಮನನ್ನು ಅನುಸರಿಸುವವರು ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ (ರೋಮಾ. 8:5).*

[redacted]

[redacted]